


ಸಂಪುಟ ೫ | ಆಗಸ್ಟ್ ೧೯೪೬ | ಸಂಚಿಕೆ ೫

ಕುಹಕಿಡಿಗಳು

ರಾಮರಾಜ್ಯ, ರಾಮರಾಜ್ಯ ಎಂದು ಏಕಾದರೂ ಕರೆದರೊ?

—ಹಾಗೋ! ಎಂದು, ರಾಮಸ್ವಾಮಿ ಬಂದೇಬಿಟ್ಟ!

* * *

ದೊಡ್ಡಾಸ್ಪತ್ರೇಲಿ ಕೇಳಿದ್ದು—"ಒಳ್ಳೇ ಸಮಯದಲ್ಲೇ ಶಸ್ತ್ರ ಚಿಕಿತ್ಸೆ ಮಾಡಿದಿರೀ ಹಾಗಾದರೆ".

"ಹೌದು, ಇನ್ನೊಂದು ದಿನ ಬಿಟ್ಟಿದ್ದರೆ, ರೋಗ ವಾಸಿಯಾಗಿಬಿಡುತ್ತಿತ್ತು".

* * *

ಬೊಂಬಾಯಿನಿಂದ ಕಾನ್‌ಸ್ಟಿಟ್ಯೂಯೆನ್ಟ್ ಅಸೆಂಬ್ಲಿಗೆ ಅರ್ಜಿ ಹಾಕಿದವರೊಬ್ಬರು 'ದೇವ'ರು ಸೂಚಿಸಿದವರು, 'ದೇಶ' ಅನುಮೋದಿಸಿದುದು ಎಂದು ಬರೆದರಂತೆ.

—ಈ ಅಸೆಂಬ್ಲಿಯಲ್ಲಿ 'ದೇವರು' ಇಲ್ಲ, 'ದೇಶ' ಇನ್ನೂ ಗೊತ್ತಾಗಿಲ್ಲ, ಎಂಬ ನೆಪದಿಂದ ಆತನ ಅರ್ಜಿಯು ತಿರಸ್ಕೃತವಾಯಿತಂತೆ.

* * *

ಮೊನ್ನೆ ಹೋಟಲಿಗೆ ಹೋದವನೊಬ್ಬನು, "ಅಂಚೆ ಮುಷ್ಕರಕಾರರ ಜತೆಗೆ ಸಹಾನುಭೂತಿ ತೋರಿಸಲು ಹೋಟಲ ಮಾಣಿಗಳೂ ನಿಂತಲ್ಲೇ ಮುಷ್ಕರ ಹೂಡಿದಂತೆ ತೋರುತ್ತದೆ" ಎಂದನಂತೆ.

ಆಹಾರ ತುಂಬಿದ ಹಡಗುಗಳು ಹಲವು ಬೊಂಬಾಯಿ ಬಂದರಿಗೆ ಬಂದಿವೆ ಯಂತೆ. (ಸುದ್ದಿ).

—ರೇಷನ್ ಕಾರ್ಡು ನೋಡಿ ಹೊಟ್ಟೆ ತುಂಬಿಕೊಳ್ಳುತ್ತಿದ್ದವರು, ಈಗ ಈ ಸುದ್ದಿ ಓದಿ ಹೊಟ್ಟೆ ತುಂಬಿಕೊಳ್ಳಬಹುದು.

* * *

ಹೆಬ್ಬಾಳಿನಲ್ಲಿ ಎರಡು ತಲೆ ಕರು ಹುಟ್ಟಿತಂತೆ.

—ಒಂದು ಬಾಯಿಗೇ ಹುಲ್ಲು ಸಾಲದು–ಬಡ ಮುತ್ತೈದೆಗೆ ಇಜ್ಜೋಡಿ ವಾಲೆ.

* * *

ಬರೋಡಾದಿಂದ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಗೆ ಚುನಾಯಿತ ಸದಸ್ಯರನ್ನು ಕಳಿಸುವರಂತೆ–ತಿರುವಾಂಕೂರಿನಿಂದ ಶೇಕಡ ೫೦ ರಷ್ಟು ಚುನಾಯಿತರಂತೆ.

—ನಮ್ಮಲ್ಲಿ ಚುನಾಯಿತರು ಹಾಗಿರಲಿ, ಮುಖ್ಯ ಪ್ರಜೆಗಳು ಯಾರು ಎಂದೇ ನಿರ್ಧರವಾಗಿಲ್ಲವಂತೆ.

* * *

ನಾನ್‌ಗೆಜಿಟೆಡ್ ನೌಕರರಿಗೆಲ್ಲಾ ತುಟ್ಟಿಭತ್ಯವನ್ನು ಶೇಕಡಾ ೫೦ ರಷ್ಟು ಹೆಚ್ಚು ಮಾಡಿದ್ದಾರಂತೆ.

—ಗೆಜಿಟೆಡ್ ಆಫೀಸರುಗಳಿಗೆ–ಅವರವರ ಶಕ್ತ್ಯಾನುಸಾರ.

* * *

ಶಿವಮೊಗ್ಗಾಕ್ಕೆ ಬಂದ ಬಟ್ಟೆಗಳನ್ನು ಇನ್ನೂ ಮಾರಾಟಕ್ಕೆ ಕೊಟ್ಟಿಲ್ಲವಂತೆ

—ಕಾರಣ, ರಬ್ಬರು ಸ್ಟಾಂಪು ಸಿದ್ಧವಾಗಿಲ್ಲವಂತೆ.

* * *

ಪೆಟ್ರೋಲ್ ರೇಷನಿಂಗು ನಿಲ್ಲಿಸಲ್ಪಡಬಹುದೆಂದು ಒಬ್ಬ ಮೋಟಾರಿಕನು ಕೂಪನ್ ದಂಡವಾಗುತ್ತಲ್ಲಾ ಎಂದು ಈಗಲೇ ಪೆಟ್ರೋಲ್ ಕೊಳ್ಳುತ್ತಿರುವನಂತೆ.

* * *

ಸಂಕಟ ಬಂದರೆ ವೆಂಕಟರಮಣ.

—ಹೌದು. ಆದರೆ, ವೆಂಕಟರಮಣ ಬಂದರೆ ಸಂಕಟವೇ? ಎಂದೆನ್ನಿಸುತ್ತದೆ ನ್ಯಾಯವಿಧಾಯಕ ಸಭೆಯ ಭಾಷಣಗಳನ್ನು ಓದಿದರೆ.

* * *

ಕಾಂಗ್ರೆಸ್ ಅಧ್ಯಕ್ಷರಿಗೆ ಸೆಕೆಂಡ್‌ಕ್ಲಾಸ್ ಟಿಕೇಟ್ ಸಿಗಲಿಲ್ಲವಂತೆ.

—ವಿಚಾರಿಸಿದ್ದರಲ್ಲಿ–ಗಾಂಧಿಟೋಪಿ ಹಾಕಿದವರಿಗೆ ಗಾಂಧೀ ಕ್ಲಾಸ್ ಟಿಕೆಟ್ ಮಾತ್ರ–ಎಂದು ತಿಳಿಯ ಬಂತು.

* * *

ಈಗ ಕಾಶ್ಮೀರಕ್ಕೆ ನೆಹ್ರೂ ಹೋಗಬಹುದಂತೆ.

—ಹಾಗೂ ಹೈದ್ರಾಬಾದಿಗೂ ಬರಬಹುದಂತೆ —

ಉರಿಗಾಳು

—o—

ಕಾನ್‌ಸ್ಟಿಸ್ಟುಯೆಂಟ್ ಅಸೆಂಬ್ಲಿ ಎಂಬುದಕ್ಕೆ ವ್ಯಾಜ್ಯಾಂಗ ರಚನಾ ಸಭೆ, ಎಂಬುದೇ ಸರಿಯಾದ ಭಾಷಾಂತರ ಎಂದು ತಿಳಿದವರು ಹೇಳುತ್ತಾರೆ.

* * *

ಮಹಾರಾಜಪುರಂ ವಿಶ್ವನಾಥಭಾಗವತರ ಸಂಗೀತ-ಜೀವನದ ರಜತ ಮಹೋತ್ಸವವನ್ನು ವಿಜೃಂಭಣೆಯಿಂದ ಮೊನ್ನೆ ಕೊಂಡಾಡಲಾಯಿತು (ಬಾತ್ಮಿ)....ಅನೇಕರ ಸಂಗೀತ ಜೀವನದ ರಜತೋತ್ಸವ ಅವರ ೨೫ನೇ ಹುಟ್ಟಿದ ಹಬ್ಬದ ದಿನವೇ ನಡೆಯುತ್ತದೆ.

* * *

ಎಲ್ಲೆಲ್ಲಿ ಅಗತ್ಯವೋ ಅಲ್ಲೆಲ್ಲ ಉಚಿತ ಭೋಜನಾಲಯಗಳನ್ನು ತೆರೆಯುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ (ಪತ್ರಿಕೆ) ಬರಗಾಲಕ್ಕೆ ಮೊದಲೇ ಈ ಕೆಲಸವನ್ನು ಅವರು ಅಳಿಯಂದಿರಿಗಾಗಿ ಮಾಡಿರುವರು.

* * *

ಅಣು ಬಾಂಬು ಬಿದ್ದು ಸಿಡಿದ ಮೇಲೂ ಕೂಡ, ಅಲ್ಲಿದ್ದ ಆಡುಗಳು ಹಾಯಾಗಿ ಹುಲ್ಲು ತಿನ್ನುತ್ತಿದ್ದುವು........ಅಜ ಅಂದರೆ ಬ್ರಹ್ಮ ಅಲ್ಲವೆ?

* * *

ಪತ್ರಿಕೆಗಳಿಂದ ಆರಿಸಿದ್ದು: 'ಅನೇಕ ಪೌರಾಣಿಕ ಉಡಿಗೆ ತೊಡಿಗೆಗಳಿಂದ ಕೂಡಿದ ನಾಟ್ಯ' (!)....“ಈ ಸಾಬೂನು ನಿಮ್ಮ ಸೌಂದರ್ಯವನ್ನು ವಂಶಪಾರಂಪರ್ಯವಾಗಿ ಉಳಿಸುವುದು” (ಅಯ್ಯೋ! ದೇವರೇ!)....“ಕನ್ನಡ, ತಮಿಳು, ಈ ಎರಡು ಭಾಷೆಗಳಲ್ಲಿಯೂ ತೆಗೆಯುತ್ತಿರುವ ಈ ಚಿತ್ರಕ್ಕೆ ನಟನಟಿಯರ ತುಟಿಗಳ ರಚನೆಯನ್ನು ಸರಿಗೂಡಿಸಬೇಕಾಗಿರುವುದರಿಂದ ಹೆಚ್ಚುಕಾಲ ಹಿಡಿಯುತ್ತದೆ”(?)

* * *

ಅಣುಬಾಂಬು ಗುರಿತಪ್ಪಿ Independence ಎಂಬ ಹಡಗಿನ ಮೇಲೆ ಸಿಡಿಯಿತು (ಬಾತ್ಮಿ)....ಹಡಗಿನ ಹೆಸರನ್ನು ನೋಡಿದರೆ, ಗುರಿ ತಪ್ಪಿತೆಂದು ಹೇಳಲಾಗುವುದಿಲ್ಲ.

* * *

“ಮಹಾ-ರಾಷ್ಟ್ರಗಳಲ್ಲಿ ಕೊನೆಗೂ ಒಪ್ಪಂದ” (ಶಿರೋನಾಮೆ) ... ಸದ್ಯಃ, ಕೊನೆಗಾಲಕ್ಕೆ ಒಪ್ಪಂದವಾಯಿತಲ್ಲಾ.

* * *

ಜಾಹಿರಾತು : “ಯಾವಾಗಲೂ ಕಾಂಗ್ರೆಸ್ ಬತ್ತಿಗಳನ್ನೇ ಉಪಯೋಗಿಸಿ” ....ರಾಜಕೀಯ ?

* * *

ಮುಷ್ಕರ ಹೂಡಿರುವ ಅಂಚೆ ಜವಾನರು ನಗರದ ಮನೆಮನೆಗೂ ಹೋಗಿ ತಮಗೆ ನೆರವಾಗುವಂತೆ ಕೇಳಿಕೊಳ್ಳುವ ಕಾಗದಗಳನ್ನು ಹಂಚುತ್ತಿದಾರೆ....ಅಂತು, ಅಲೆಯುವುದು ತಪ್ಪಿಲ್ಲ !

* * *

ಇಂಡಿಯಾ ಸರ್ಕಾರದ ನಿವೃತ್ತ ಸಚಿವರು ಶೀಘ್ರದಲ್ಲಿಯೇ ಮೈಸೂರಿನ ಫಲವತ್ತಾದ ಭೂಮಿಯಲ್ಲಿ ವ್ಯವಸಾಯಮಾಡುವರು (ಸುದ್ದಿ).... ಇದು ಹಳೇ ಸುದ್ದಿ !

* * *

ಮೈಸೂರಿನವರೊಬ್ಬರಿಗೆ ಹೊರಗಡೆ ಉತ್ತಮದರ್ಜೆಯ ಕೆಲಸ ದೊರೆತಿದೆ.... ಬಟ್ಟೆ ಇದ್ದಷ್ಟು ಅಂಗಿ ಹೊಲೆದುಕೊಳ್ಳಲಿ, ಬೇಗ.

* * *

ಪತ್ರಿಕೆಯಲ್ಲಿ ಕಂಡದ್ದು : “ವಿವಾಹ: ನಾಗಮ್ಮ–ಗರುಡಾಚಾರ್”........ ದಂಪತಿಗಳು ಅನ್ಯೋನ್ಯವಾಗಿ ಬಾಳಲೆಂದು ನಾವು ಹಾರೈಸುತ್ತೇವೆ.

* * *

ನಗರದ ಹೋಟಲಿಗೆ ಹೋದವನೊಬ್ಬನು ‘ಮಾಣಿಯು ಬಂದಾಗ’ ನನಗೊಂದು ಮಸಾಲ್ ದೋಸೆ’ ಕೊಡು ಎಂದನಂತೆ.

—ಮಾಣಿಯು ‘ಇದೇನು ನಿಮ್ಮ ಯುದ್ಧಾನಂತರದ ಯೋಚನೆಯೋ’ ಎಂದು ಕೇಳಿದನಂತೆ.

* * *

ಸರ್ಕಾರದವರು ಉಚಿತ ಭೋಜನ ಶಾಲೆಗಳನ್ನೂ–ಹಾಗೂ ಉಚಿತ ಚಿಕಿತ್ಸಾಲಯಗಳನ್ನೂ ಏರ್ಪಡಿಸಿರುವರಂತೆ. (ಸುದ್ದಿ).

—ಇರಬಹುದು–ಆದರೆ ಈ ಸುದ್ದಿ ಹೇಳುವಾಗ ಒಂದಾದ ಮೇಲೆ ಒಂದು ಹೀಗೆ ಹೇಳುವುದು ಅಷ್ಟು ಸಮರ್ಪಕವಲ್ಲ.

—⁂ ಕಾರಣ ⁂—

ಇದೇನು? ಇಂದು ರೀಡಿಂಗ್ ರೂಮು ತುಂಬಿದೆ! ಎಂದೂ ಬರದ ನಾನೇ ಬಂದೆನೆಂದೋ?! ದಿನವೂ ರಾಮು ಹೇಳುತ್ತಿದ್ದ "ಅಣ್ಣಾ, ಇವತ್ತು ರೀಡಿಂಗ್ ರೂಂಗೆ ಹೋಗಿದ್ದೆ, ಏನಣ್ಣಾ, ಒಬ್ಬರಾದರೂ ಇರಬೇಡವೇ ಅಲ್ಲಿ, ಓದೋಕೆ! ನಾನೊಬ್ಬನೇ ನೋಡಪ್ಪ ಇದ್ದ ಬದ್ದ ಹಾಳೇ ಮೇಲೆಲ್ಲಾ ಕೈಯಾಡಿಸಿಬಿಟ್ಟೆ". ಹಾಗಾದರೆ, ಇಂದು ಜನ ತುಂಬಿರಲು ಕಾರಣ? ನನಗೆ ಆಶ್ಚರ್ಯವಾಯಿತು. ಹೇಗೂ ಬಂದ ಕೆಲಸಕ್ಕೆ ಕಾಲ ಬೇಕಾದಷ್ಟು ಇದ್ದುದರಿಂದ ಪೇಪರನ್ನಾದರೂ ಓದೋಣವೆಂದು ರೀಡಿಂಗ್ ರೂಮಿಗೆ ಬಂದರೆ ನನ್ನ ದೃಷ್ಟಕ್ಕೆ ಪೇಪರಿನ ತುಣುಕೊಂದಾದರೂ ಸಿಗಬೇಡವೇ?

ಒಬ್ಬಾತ "ಪಿತೃದೇಶ"ದಲ್ಲಿನ 'Wanted' ಕಾಲಂಗಳನ್ನೇ ನೋಡುತ್ತಿದ್ದ. ನಾನೂ–ನನ್ನ ಮಗ ರಾಮು ಆ ವರ್ಷ ಬಿ.ಎ., ಪಾಸು ಮಾಡಿದ್ದ. ಅವನಿಗೋಸ್ಕರ–ಅದನ್ನು ನೋಡಲು ಆತನ ಹತ್ತಿರ ಹೋದೆ. ಪೇಪರನ್ನು ಒಂದು ಕೈಯಿಂದ ಹಿಡಿದು ಎಲ್ಲಿ ಸ್ವಾಮಿ, ಸ್ವಲ್ಪ ತೋರಿಸಿ, ಆ ಎಂದು ಹಲ್ಲು–ಗಿರಿದೆ ಏನ್ರೀ, ಇದು ಪಬ್ಲಿಕ್ ರೀಡಿಂಗ್ ರೂಂ ಅನ್ನೋದು ಗೊತ್ತಿಲ್ಲವೋ? ಎಂದು ರೇಗಿದ. ಪಾಪ, ಪಬ್ಲಿಕ್ ರೀಡಿಂಗ್ ರೂಂ, ಎಂದು ಬಾಯಲ್ಲಿ ಹೇಳಿದರೂ, ನಾನೂ 'ಪಬ್ಲಿಕ್'ನಲ್ಲಿ ಒಬ್ಬನೆಂದು ಯೋಚಿಸುವ ತಾಳ್ಮೆ ಆತನಿಗಿರಲಿಲ್ಲ.

ಇತರ ಪತ್ರಿಕೆಗಳ ಗತಿಯೂ ಹೀಗೇ ಆಗಿತ್ತು. ಕೆಲವರು 'ಬೇಕಾಗಿದೆ' ನೋಡಿದರೆ, ಇನ್ನು ಕೆಲವರು "ಕಳೆದು ಹೋಗಿದೆ ... ... ಹುಡುಕಿಕೊಟ್ಟವರಿಗೆ.... ಬಹುಮಾನ .." ಎಂಬ ಜಾಹಿರಾತನ್ನು ಅನೇಕಸಲ ಮೊದಲಿನಿಂದ ಕಡೆಯವರೆಗೆ ಓದಿ ಅದನ್ನೇ ಕತ್ತರಿಸಿ ಜೇಬಿಗೆ ಸೇರಿಸುತ್ತಿದ್ದರು. ಇನ್ನು ಕೆಲವರು "ನಮ್ಮ ಕಂಪನಿಯ ಸೆಂಟನ್ನು ಮಾರಿ ತಿಂಗಳಿಗೆ ೩೦೦ ರೂ. ಸಂಪಾದಿಸಿ" ಜಾಹಿರಾತಿನ ಅಡ್ರೆಸ್ಸನ್ನು ಬಾಯಿಪಾಠ ಮಾಡುತ್ತಿದ್ದರು. ಮತ್ತೊಬ್ಬರು 'ಕ್ಲಿಷ್ಟಪ್ರಯ್ಯ ಸ್ಮಾರಕ, ಚಕ್ರಬಂಧ ಸ್ಪರ್ಧೆ'ಯ ಕೂಪನ್‌ಗಳುಳ್ಳ ಹಾಳೆಗಳನ್ನು, ಮಡಿಸಿ, ದೂರದಲ್ಲಿದ್ದ, ರೀಡಿಂಗ್‌ರೂಂ ಕ್ಲಾರ್ಕಿಗೆ ಕಾಣದಂತೆ ಜೇಬಿಗೆ ಸೇರಿಸುತ್ತಿದ್ದರು.

ದಿನ ಪತ್ರಿಕೆಗಳ ತಂಟೆಯೇ ಬೇಡ, ವಾರ ಪತ್ರಿಕೆಗಳನ್ನಾದರೂ ನೋಡೋಣ ಎಂದು ಹೊರಟೆ ಅವುಗಳ ಕಡೆಗೆ ಎಲ್ಲವೂ ವಾರಗಟ್ಟಲೆ ಹಳೆಯುವೇ! ಅದಕ್ಕೆ ಇರಬೇಕು, ಅವನ್ನು ಯಾರೂ ಮುಟ್ಟಿರಲಿಲ್ಲ. ಯಾರ ಮೇಲೆ ರೇಗುವುದು? ರೇಗಿದರೇನು ಪ್ರಯೋಜನ? ಹೋಗಲಿ, ರೂಮಿನ ಗುಮಾಸ್ತೆಯನ್ನೇ ಪುಸಲಾಯಿಸಿಯಾದರೂ ಯಾವುದಾದರೂ ಹೊಸಪತ್ರಿಕೆಯನ್ನು ಓದೋಣವೆಂದು, ಅವನ ಬಳಿಗೆ

ಹೋಗಿ, "ನಮಸ್ಕಾರ....ರಾಯರಿಗೆ" ಎಂದೆ. ಆಸಾಮಿ ಯಾವುದೋ ಹಳೆಯ ಲೆಕ್ಕ ನೋಡುತ್ತಿದ್ದ. ಕತ್ತೆತ್ತಿ, ಕನ್ನಡಕದ ಮೇಲಿನಿಂದ ನೋಡುತ್ತ, "ನಮಸ್ಕಾರ" ಎಂದು ಗೊಣಗಿದ ಅಭ್ಯಾಸ! ಪಾಪ. "ಹ್ಞ ...ಹ್ಞ ...ಇವತ್ತು ಬಹಳ ರಷ್ ಅಲ್ಲವೇ ...ನಿಮಗೆ ಬಹಳ ತೊಂದರೆ'' ಎಂದು ಷುರುಮಾಡಿದೆ ಪೀಠಿಕೇನ. "ಕಷ್ಟ ಏನು? ಇದ್ದೇಇದೆ. ಅಂದಹಾಗೇ, ಇವತ್ತು ಪಕ್ಕದ ಸೊಸೈಟಿ ಜನರಲ್‌ಬಾಡಿ ಮೀಟಿಂಗ್ ಇದೆಯಂತೆ ...ಇನ್ನೂ ಪಲಾಹಾರದ ಟೈಂ ಆಗಿಲ್ಲವಂತೆ ಅದಕ್ಕೇ ಮೆಂಬರುಗಳೆಲ್ಲ ಇಲ್ಲಿ....ಅದೇ ರಷ್....'' ಎಂದು ಅವನು ಮುಗಿಸುವುದರೊಳಗಾಗಿ, ನನಗೆ ನಾನು ಬಂದಿದ್ದುದರ ಕಾರಣ ಜ್ಞಾಪಕಕ್ಕೆ ಬಂದು, ಸೊಸೈಟಿಯ ಕಡೆ ಓಡಿದೆ. ರೀಡಿಂಗ್ ರೂಂನಲ್ಲಿದ್ದವರೆಲ್ಲರೂ, ಅಲ್ಲಿ ಹಾಜರಾಗಿದ್ದರು ಆಗಲೇ.

—ಹೊನ್ನಮ್ಮ ಎಚ್. ಮೂರುತಿ.

ಉಪಮಾ ಜೀವನ

ಗುಂಡ ಬಹಳ ವರ್ಷ ಮೀನ ಮೇಷ ಎಣಿಸಿದ, ಯಾರು ಯಾರಿಗೋ ಗಾಳ ಹಾಕಿದ; ಬೆಣ್ಣೆ ಹಚ್ಚಿದ; ಧೂಪ ತೋರಿಸಿದ; ಅವರ ಮುಂದೆ ರಾಗ ಎಳೆದ, ಅವರ ಹಾಡಿಗೆ ತಾಳ ಹಾಕಿದ. ರಾಮಾಯಣ ಹೇಳಿದ; ತನ್ನ ಶಂಖ ಊದಿದ; ತುತ್ತೂರಿ ಬಾರಿಸಿದ; ಬಾಲ ಚಚ್ಚಿದ. ರೈಲು ಬಿಟ್ಟ. ರಂಗೋಲಿ ಕೆಳಗೆ ನುಸುಳಿದ; ಕಣ್ಣು ಮುಚ್ಚಿಕೊಂಡು ಹಾಲು ಕುಡಿದ. ಆದರೇನು? ಬೀಸುವ ದೊಣ್ಣೆ ತಪ್ಪಿಸಿಕೊಂಡ, ಅಷ್ಟೆ. ಕೊನೆಗೆ, ಬೇರು ಬಿಟ್ಟಕಡೆಯಿಂದೆಲ್ಲ ಗಾಡಿ ಬಿಡಬೇಕಾಗಿ ಬಂತು. ಏಕೆಂದರೆ, ಅವನು ನಂಬಿದವರಿಗೇನೆ ನಾಮ ಬಳಿದ, ಟೋಪಿಹಾಕಿದ; ಅವರ ಸಂಸಾರದಲ್ಲಿ ಹುಳಿ ಹಿಂಡಿದ; ಅವರಿಗೆಲ್ಲ ನೀರು ಕುಡಿಸಿದ; ಅವರ ಮನೆಯನ್ನೆಲ್ಲ ಸಾರಿಸಿ ಗುಡಿಸಿದ, ತೊಳೆದ; ಅವರನ್ನು ಹಣ್ಣುಗಾಯಿ ನೀರುಗಾಯಿ ಮಾಡಿದ; ಅವರ ತಲೆ ಮೇಲೆ ಚಪ್ಪಡಿ ಎಳೆದ; ಒಟ್ಟಿನಲ್ಲಿ, ಅವರಿಗೆ ಹುಟ್ಟಿದ ಹಬ್ಬ ಮಾಡಿದ. ಅವರೆಲ್ಲ ಗುಂಡನ ಸಂಗಡ ಸೇರುವುದಿಲ್ಲವೆಂದು ಕಡ್ಡಿ ಮುರಿದಿಟ್ಟರು. ಸರಿ! ಗುಂಡ ಬೇರೆ ಊರಿಗೆ ಸವಾರಿ ಹೊರಟ. ಅಲ್ಲಿ ಯಾರು ಯಾರದೋ ಜುಟ್ಟು ಹಿಡಿದ; ಅವರ ತಲೆಯ ಮೇಲೂ ಗೂಬೆ ಕೂರಿಸಿದ. ಅಲ್ಲಿಂದಲೂ ಕಂಬಿ ಕಿತ್ತ. ಎಷ್ಟು ದಿವಸ ಅವನು ಕಣ್ಣು ಮುಚ್ಚಿಕೊಂಡು ಹಾಲು ಕುಡಿದಾನು? ಗುಂಡ ದಿವಾಳಿ ಎದ್ದ; ಅವನು ಮಣ್ಣು ಹಾಕಿದ್ದ ಕಡೆಯಲ್ಲೇ ಅವನನ್ನು ಮಣ್ಣು ಮುಕ್ಕಿಸಿದರು. ಕಡೆಗೆ, ಮೊನ್ನೆ ಘಟ ಉರುಳಿಸಿದ.

ತಾತನಿಗೆ ತಿಳಿಸಿದೆ

ತಾತಾ! ನಾನು ಪರೀಕ್ಷೆಗೆ ಕಟ್ಟಿದ್ದೆ.

ಇನ್ನೇನೂ ಮಾಡುವುದಕ್ಕೆ ತೋಚದೆ ಇದ್ದ ಮೇಲೆ, ನೀನುತಾನೆ ಏನು ಮಾಡೀಯೆ?

ನನಗೆ ಪಾಸಾಯಿತು.

ಆಗಲಿ! ನಾನೇನು ಬೇಡ ಅನ್ನಲಿಲ್ಲವಲ್ಲಾ!

ಫಸ್ಟ್ ಕ್ಲಾಸಲ್ಲಿ ಬಂದೆ.

ತಿರುಗಿ ಅಲ್ಲಿಗೇ ಇಳಿದೆಯೇನು?

ಮೊನ್ನೆ ಮದುವೆ ಮಾಡಿಕೊಂಡೆ.

ನನಗೆ ಯಾಕೆ ಹೇಳುತ್ತೀಯೆ, ಅದನ್ನ?

ಷೇಕ್‌ದಾರರ ಮಗಳು.

ಅಂತೂ, ಯಾವುದೋ ಹೆಣ್ಣು! ತಾನೆ?

ಕೆಲಸ ಬೇರೆ, ಆಗಿದೆ! ನನಗೆ.

ಆಗೋದೆಲ್ಲ ಆಗಲೇಬೇಕು!....ಹಣೇಬರಹ.

ನೂರು ರೂಪಾಯಿ ಸಂಬಳ ಕೊಡುತ್ತಾರೆ, ತಾತ.

ಕೈಯಲ್ಲಿ ಉಳಿಸಿಕೊಳ್ಳೋದಕ್ಕೆ ಯೋಗ್ಯತೆ ಇಲ್ಲ ಅಂದ ಮೇಲೆ ಕೊಟ್ಟೇಕೊಡುತ್ತಾರೆ!

ಹೋಗಿಬಿಟ್ಟು ಬರುತ್ತೇನೆ.

ಬಾಗಿಲು ಹಾಕಿಕೊಂಡು ಹೋಗು, ಹೋಗುತ್ತಾ.

ಟಪಾಲ್ ಮುಷ್ಕರ

ಸ್ವಾಮಿ, 12–7–46.

ಈ ಕಾಗದ ಬಹುಶಃ ನಿಮಗೆ ತಲಪಲಾರದು. ತಲಪದೆ ಇದ್ದರೆ, ಕೂಡಲೇ ತಿಳಿಸಿ. ಒಂದು ವೇಳೆ ನಿಮ್ಮ ಉತ್ತರ ನನಗೆ ತಲಪದೆ ಇದ್ದರೆ, ನಾನೂ ನಿಮಗೆ ತಿಳಿಸುತ್ತೇನೆ. ಆಗ, ನೀವೇ ಮುಖತಃ ಬಂದು ಮಾತನಾಡಿ, ಈ ಕಾಗದದಲ್ಲಿ ಹೇಳಿರುವ ಅಂಶವನ್ನು ಇತ್ಯರ್ಥಮಾಡಿಕೊಳ್ಳಬಹುದು .... (ಇತ್ಯಾದಿ).



ಲೇ! ಫೋಲಾರ್ಡ್. ನೀನು 'ಬೋಲ್' ಮಾಡು ಈಗ.

ಅಂತೂ.......

—o—

ನಾನೊಂದು ಕಾದಂಬರಿ ಬರೆದೆ. ನವರಸಗಳನ್ನೂ ಹಿಂಡಿ ಹಿಂಡಿ, ಭಾವನಾ ಬಾಣಲಿಯಲ್ಲಿ ಕಾಯಿಸಿ, ಪಾಕವಾಗಿಸಿ, ರಸಗಟ್ಟಿ ಮಾಡಿದೆ; ಕಾವ್ಯದೇವಿಗೆ ನೈವೇದ್ಯ ವಾಗಿಟ್ಟೆ. ನನ್ನನ್ನೊಲಿದ ಆ ಕಾವ್ಯ ಕಾಮಿನಿಯ ಪ್ರಭಾವದಿಂದಲೊ ಏನೋ, ಬೇರೆ ಯಾರೂ ಅದನ್ನು ಸ್ವೀಕರಿಸಿ ಆಸ್ವಾದಿಸೆನೆಂದರು....ಜನ ಓದೆನೆಂದು ಮದ್ದನೀಂಟುವ ಮಗುವಿನಂತೆ ಮೋರೆ ತಿರುಗಿಸಿಕೊಂಡಿತು ...

ಮೊದಲು ಅವಳಿಗೆ ಹೇಳಿದೆ: " ನೀನು ಓದಿಬಿಟ್ಟು, ಹೇಗಿದೆ ಹೇಳೆ" ಅಂತ. ಅವಳೂ ಅರ್ಧ ಓದಿದಳು; ಮೇಲೆ ಓದುವುದಕ್ಕೆ ಅವಳಿಂದಾಗಲಿಲ್ಲ. ಅದು 'ಹೇಗಿದೆ?' ಎಂದು ಅವಳು ಹೇಳುವ ಬದಲು 'ಧನ್ವಂತರೀ ಧನುಸ್ಸು' (ಡಾಕ್ಟರ ಬಿಲ್ಲು) ಹೇಳಿತು....

'ಕಂಡುಹಿಡಿದ ಬಾಂಬನ್ನು ನಮ್ಮ ದೇಶದ ಮೇಲೇ ಪ್ರಯೋಗಿಸಿಕೊಂಡರೆ ಯಾವ ದೇವರಿಗೆ ಪ್ರೀತಿ?' ಎಂದುಕೊಂಡು, ತಿಂಗಳಿಗೊಂದು ಅಧ್ಯಾಯ ಪ್ರಕಟಿಸಲಿ ಎಂತ 'ಮೊರೆವಂಜಿ'ಗೆ ಕಳಿಸಿದೆ. ರಿಪ್ಲೈ ಕಾರ್ಡಿನ ಮೇಲೆ ನನ್ನ ವಿಳಾಸ ಬರೆದು ಬಿಟ್ಟಿದ್ದರಿಂದ—ಉತ್ತರ ಬಂತು! " ಈಚೀಚೆಗೆ ಜಾಹೀರಾತು ಪ್ರಕಟಿಸುವುದಕ್ಕೇ ಕಾಗದ ಸಾಲದಾಗಿರುವುದರಿಂದ, ಕತೆ ಕಾದಂಬರಿಗಳನ್ನು ಪ್ರಕಟಿಸುವುದು ನಮ್ಮಿಂದ ಸಾಧ್ಯವಿಲ್ಲವಾಗಿದೆ ...ಅಂಚೆವೆಚ್ಚ ಕಳುಹಿಸಿದರೆ ನಿಮ್ಮ ಕಾದಂಬರಿಯ ಹಸ್ತಪ್ರತಿ ಯನ್ನು ಹಿಂದಿರುಗಿಸಲಾಗುವುದು ..." ನಾನು ಈ ಸತ್ಯವನ್ನು ಆ ಪತ್ರಿಕೆ ನೋಡಿ ದಾಗಲೇ ತಿಳಿದುಕೊಂಡಿರಬೇಕಾಗಿತ್ತು....ತಡವಾದರೆ ಸಂಪಾದಕರ ಮನೆ ಸಕ್ಕರೆಗೆ ನನ್ನ ಕಾದಂಬರಿಯು ಕಾಗದ ಆಶ್ರಯವಾದೀತೆಂದು ಅಂಜಿ, ಕೂಡಲೇ ಅಂಚೆವೆಚ್ಚ ಕಳುಹಿಸಿಬಿಟ್ಟೆ ...

ಎಂಥೆಂಥಾ ಕುಸುಮಗಳನ್ನೋ ಪೋಣಿಸಿಕೊಂಡಿದ್ದ ಧನೋಹರ ಗ್ರಂಥ ಮಾಲೆಗೆ ಕಳಿಸಿದೆ. ಉತ್ತರವೂ ಬಂತು: " ತಮ್ಮ ಕಾದಂಬರಿಗಿಂತ ಉತ್ತಮವಾದ ಕಾದಂಬರಿಗಳನ್ನು ನಾವಿಲ್ಲಿಯವರೆಗೂ ನೋಡಿಲ್ಲ....ನಾವು ಅದನ್ನು ನಮ್ಮ ಮಾಲೆ ಯಲ್ಲಿನ ಒಂದು ಮಲರಾಗಿಸಲು ಅತ್ಯಂತಾತ್ಯಂತ ಆನಂದಗೊಳ್ಳುತ್ತೇವೆ...." ಅದೀಗ ಸರಿ! ನನ್ನಲ್ಲಿ ಹಿಗ್ಗು, ಆನಂದ, ಸಂತಸ ಮೊದಲಾದ ಹತ್ತಾರುಬಗೆಯ ಮೋಡ ಗಳು ಉದ್ಭವಿಸಿ, ಮೇಳವಿಸಿದುವು; ಕುಣಿದು, ಕುಪ್ಪಳಿಸಿದುವು; ನಾನೂ ಅವು ಗಳೊಡನೆ ಕುಣಿದೆ, ಕುಪ್ಪಳಿಸಿದೆ. ಮುಂದೆ ಓದಿದೆ: "ಆದರೆ—" ಇದೇನು 'ಆದರೆ'? ಚೆಲುಮೊಗದಲ್ಲೂ ಛಿಂಪಂಝಿಯದಂತವೆ? ಮೂರ್ಚ್ಛಿಯಾಟದಲಿ ಮಂಜು ಮಳೆಯೆ? ... " ಆದರೆ ಒಂದೇ ಒಂದು ಸಣ್ಣ ವಿಷಯವನ್ನು ತಮ್ಮಲ್ಲಿ ಬಿನ್ನೈಸಿಕೊಳ್ಳಲಿಚ್ಛಿಸು

ತ್ತೀವೆ. ನಾವು ನಮ್ಮ ಚಂದಾದಾರರ ಗ್ರಂಥಗಳನ್ನು ಮಾತ್ರವೇ ಪ್ರಕಟಿಸುವುದಾದ್ದರಿಂದ, ತಾವು ನಮ್ಮ ಗ್ರಂಥಮಾಲೆಗೆ ಈ ತಿಂಗಳಿಂದಲೇ ಚಂದಾಹಣವನ್ನು ಕಳುಹಿಸಬೇಕೆಂದು ಕೋರುತ್ತೀವೆ ಚಂದಾವಿವರ—'' ನಾನು ಮುಂದೆ ಓದಲಿಲ್ಲ ...ಅದಕ್ಕೇ ಮತ್ತೆ ಆ ಮಾಲೆಯಲ್ಲಿ ಅಂತಹ ಕುಸುಮಗಳು !....ಅಷ್ಟು ಚಂದಾದಾರರು !

ಸರಿ, ಹೀಗೇ ಧನೋಭುಂಜಕ ಪ್ರಕಟನ ಸಮಿತಿ, ಭಯಾನಕ ಹೊತ್ತಗೆಹಾರ, ಭೀಷಾಚಲ ಸಮಿತಿ ಎಂದು ಹತ್ತಾರುಕಡೆ ಹೋಯಿತು ಬಂತು.

ಆದರೆ ನಾನೇನೋ ಮರಳಿ, ಮರಳಿ ಯತ್ನವ ಮಾಡುತ್ತಲೇ ಇದ್ದೆ. ಇದೂ ಒಂದು ದಾರಿ ನೋಡಿಯೇ ಬಿಡೋಣ ಎಂದು ಪ್ರಗತಿಪಥದಲ್ಲಿ ಕಾಲಿಟ್ಟೆ. ಕಾದಂಬರಿಯ ಹೆಸರನ್ನು 'ಮುರಿದ ಮಂಗಳೂರು ಹೆಂಚು' ಎಂಬುದರಿಂದ 'ಕೂಲಿಯ ತಾಲಿ ಅಥವ ಬಂಡವಾಳಗಾರನ ಬಂಡವಾಳ' ಎಂಬುದಕ್ಕೆ ಬದಲಾಯಿಸಿದೆ. ಹೆಸರಿನ ಕೆಳಗೆ ಬೀಜಾಕ್ಷರಗಳಲ್ಲಿ 'ಪ್ರಗತಿಶೀಲ, ಸ್ವತಂತ್ರ, ಸಾಮಾಜಿಕ, ವಿಚಾರಪ್ರಚೋದಕ ಅದ್ಭುತ ಕಾದಂಬರಿ' ಎಂದು ಬರೆದೆ. ಪ್ರಗತಿಶೀಲರೊಬ್ಬರಿಂದ ನಲವತ್ತು ಪುಟದ ಕ್ರಾಂತಿಕಾರ ಮುನ್ನುಡಿ ಬರೆಸಿದೆ. ನನಗೆ ತಿಳಿದ ಪತ್ರಿಕೆಗಳಲ್ಲಿ, "ಬರಲಿದೆ! ಬರಲಿದೆ !! ನಿಮ್ಮನ್ನು ಹೊಡೆದೆಬ್ಬಿಸಿ ಓಡಿಸುವ ವಿಚಾರಪ್ರಚೋದಕ ಅತ್ಯದ್ಭುತ ಕಾದಂಬರಿ !....ಪ್ರಗತಿಸಾಹಿತ್ಯ ಪಿತಾಮಹರ ಪೌತ್ರರೂ, ಅನೇಕರಿಂದ ನೂರಾರು ಸಾರಿ ತೆಗಳಿಸಿಕೊಂಡಿರುವ ಹೆಮ್ಮೆಯುಳ್ಳವರೂ ಆದ ಕನ್ನಡನಾಡಿನ ಕ್ರಾಂತಿಕಾರ ಕಾದಂಬರಿ ಲೇಖಕ : 'ಕರಾಳಖಡ್ಗ'ರವರು ಬರೆದ 'ಕೂಲಿಯ ತಾಲಿ'!... ಕಾಮ-ಪ್ರೇಮ, ಸಾವು-ನೋವು, ಕ್ರಾಂತಿ-ಶಾಂತಿ, ಬಾಳು-ಗೋಳು, ಹಾಳು-ಮೂಳು ಎಲ್ಲ ಕಿಕ್ಕಿರಿದು ತುಂಬಿರುವ....ಉಗ್ರ ಕತೆ !....ಇತ್ಯಾದಿ" ಅಚ್ಚು ಹಾಕಿಸಿದೆ.. ಆದದ್ದಾಗಲಿ ಎಂದು ಯಾರ ಹಣದಲ್ಲೋ ನೂರು ಪ್ರತಿ ಅಚ್ಚಿಸಿದೆ....ಆದರೆ, ಆದರೆ 'ಕೂಲಿಯ ತಾಲಿ' ನನ್ನ ವಿಚಾರವನ್ನು ಬಿಟ್ಟು ಇನ್ಯಾರ ವಿಚಾರವನ್ನೂ ಹೊಡೆದೆಬ್ಬಿಸಲೇ ಇಲ್ಲ ....'ಯಾರದೋ' ತಗಾದೆಗೆ ಆರಂಭವಾಯಿತು....ಬಂಡವಾಳಗಾರನ ಬಂಡವಾಳವನ್ನು ಬಯಲುಮಾಡಲು ಹೋದ ನನ್ನ ಬಂಡವಾಳವೇ ಬರಿದಾಯಿತು....

ಕಡೆಗೆ, ನನ್ನ ಹೆಂಡತಿಯ ಸಲಹೆಯ ಮೇರೆಗೆ, 'ನೋವೇ' ("ಎಲ್ಲಾ ವಿಧವಾದ ತಲೆ ಕಾಲು ನೋವುಗಳಿಗೂ ಸಿದ್ಧೌಷಧ .. ತಲೆಶೂಲೆಗೆ ಶೂಲಪ್ರಾಯ") ಎಂಬ ನೋವಾರಿಗೆ ಮೂರು ತಿಂಗಳು 'ಕಂಟ್ರಾಕ್ಟು' ಕೊಟ್ಟೆ. ಅವರು ತಮ್ಮ ಔಷಧಿಯ ಪ್ರತಿಸೀಸಕ್ಕೂ ನನ್ನ ಕಾದಂಬರಿಯ ಪ್ರತಿಯನ್ನು ಉಚಿತವಾಗಿ ಕೊಟ್ಟರು ... ಅಲ್ಲೂ ನನ್ನ ಕಾದಂಬರಿಯ ಸಾಲು ಸೋಲೇ ಆಗಬೇಕೇ? ನನ್ನ ಕಾದಂಬರಿ ಹುಟ್ಟಿಸಿದ ಒಂದು ರೀತಿಯ ತಲೆನೋವನ್ನು 'ನೋವೇ' ಸಹ ಗುಣಮಾಡಲಾಗದೆ ಹೋಯಿತು. ಕಂಪನಿಯವರ ನಿರೀಕ್ಷಣೆಗೆ ವಿರೋಧವಾಗಿ, ಚಿ॥ ಔಷಧಿಗೆ, ಚಿ॥ ಸೌ॥ ಅಪಖ್ಯಾತಿಯೊಡನೆ ಲಗ್ನ ಸಾಂಗವಾಗಿ ನೆರವೇರಿತು....

* * *

ಆದರೆ....ಈಗ!....ಈಗ!....ಈಗ ನನ್ನ ಹೆಸರು— ಯಾವ ರೀತಿಯ ಬಿಸ್ಮೃತಿನ ಮೇಲೂ ನನ್ನ ಹೆಸರನ್ನು ಅಚ್ಚು ಹಾಕಿಸದಿದ್ದರೂ–ಎಂಗಳೂರಿನವರೆಲ್ಲರ ಬಾಯ ಲ್ಲಿದೆ! ವಿದ್ಯಾರ್ಥಿಗಳು ಕೂಡ ನನ್ನ ಕಾದಂಬರಿಯನ್ನು ಓದುವಂತಾಗಿದೆ. ಅದರ ವಿಷಯವಾಗಿ ವಿಮರ್ಶನಾತ್ಮಕ ಹೊತ್ತಗೆಗಳು ಹೊರಬಿದ್ದಿವೆ; ಹೆಚ್ಚೇನೆಂದರೆ, ಅವು –ನನ್ನ ಕಾದಂಬರಿಯ ಪ್ರಭಾವದಿಂದ–ಮಾರಾಟವೂ ಆಗುತ್ತಿವೆ! .. ನನ್ನ ಸಾಲಗಳು ತೀರಿವೆ, ಬ್ಯಾಂಕಕೌಂಟುಗಳು ಏರಿವೆ. ನನ್ನ ಕಾದಂಬರಿ–ಹೆಂಡತಿಯ ಶಿರೋಭಾರ ದಿಂದ ಹಿಡಿದು, 'ನೋವೇ'ನ ಅಪಖ್ಯಾತಿಯವರೆಗೂ ಹತ್ತಾರು ಅನಾಹುತಗಳಿಗೆ ಹೇತುವಾದ ನನ್ನ 'ಮುರಿದ ಮಂಗಳೂರು ಹೆಂಚು'–ಸಾವಿರಗಟ್ಟಲೆ ಮಾರಾಟ ವಾಗುತ್ತಿದೆ!

ಕಾರಣ ಇಷ್ಟೆ: ನಾನು ಮೊನ್ನೆ ಎಂಗಳೂರು ಪಠ್ಯಪುಸ್ತಕ ಸಮಿತಿಯ ಅಧ್ಯ ಕ್ಷರನ್ನು ಕಂಡಿದ್ದೆ. ನನ್ನ ಕಾದಂಬರಿಯ ಕತೆ ಕೇಳಿಬಿಟ್ಟು "ಇಂತ ಪುಸ್ತಕಗಳೇ ನಮಗೆ ಬೇಕು" ಎಂದರು....ಹೊರಗೆ ಬಂದಾಗ ನನ್ನ ಹೃದಯ ಜೇಬುಗಳೆರಡೂ ಹಗುರವಾಗಿದ್ದುವು....

ಆಯಿತು! ಈ ಸಾರಿ, ಎಂಗಳೂರಿನ ಎಸ್ಸೆಲ್ಸಿಗೆ ನನ್ನ 'ಮು ಮಂ ಹೆಂ' ಏ ಪಠ್ಯ ಪುಸ್ತಕ! ...ಅಂತೂ ನನ್ನಾಸೆ....

ಈಗ ಇನ್ನೊಂದು ಮಹಾ ಕಾದಂಬರಿ ಬರೆಯುತ್ತಿದ್ದೇನೆ. ಮುಂದಿನ ವರ್ಷಕ್ಕೆ.

—ಅಕ್ರೂರ.

ಒಳಗೆ ನೋಡಿದರೆ, ಕ್ಲಾಸೊಳಗೆ ಕುಂತಿಲ್ಲ! ಹೊರಗೆ ನೋಡಿದರೆ, ರೂಮೊ ಳಗೆ ಕುಂತಿಲ್ಲ. ಮತ್ತೆಲ್ಲಿ ಸುತ್ಯಾನು ನಮ್ಮ ಮದ್ದಾನೆ ಮುದ್ದುಮಣಿ? ತನುಮನ ವೆರಡೂ ಸಿನಿಮಾ ಮನೆಯಲ್ಲಿ ನೆಲೆಸಿತಯ್ಯ! ಆಟ ನೋಟ ಅಲ್ಲಿ, ಬೇಟಮಾಟವಲ್ಲಿ, ಕಾಟಕ್ಕೆ ನೋಟ ತಿರುವಿದರೆ, ಪಾಸ್ ಏನು, ಪಾರಡೈಸಿಂದ ಇಳಿದು ಬರ್ಕುವೆ? ಕಿರುಹಗಲಲೊಕ್ಕಡೆ, ಉರಿಹಗಲಲೊಕ್ಕಡೆ, ಇಳಿಹಗಲಲೊಕ್ಕಡೆ, ಪಟವ ನೋಡಲು ಹೊಕ್ಕಡೆ, ತಾಮಸವು ತಲೆಯೊಳಗೆ ಮನೆಮಾಡಿತಯ್ಯ. ಕಣ್ಣನೊಂದು ಹುಣ್ಣು ಮಾಡಿ, ಸಾಲತಂದು ಸೋಲಮಾರಿ, ಕನಸಿನಲಿ, ಕಂಡ ಜಯಶ್ರೀ ನನಸಿನಲಿ ಅಪ ಜಯಶ್ರೀಯಾಗಿ ಒಡೆದು ತೋರುವಳಯ್ಯ! ಇಂಥ ಕಾಡಂಬರದ ಬಣ್ಣದಣ್ಣಗಳ ಕಂಡರೆ, ಅವರೊಡನೆ ಬಲು ತಣ್ಣಗಿರಯ್ಯ, ಹೇಳಿದಳು, ನಮ್ಮ ಕೊರವಂಜಿ ಕಾಯುವ **ಪರಂಜಿದೇವಿ.**

ಬುದ್ಧಿಯ ಮಟ್ಟ

(ಆತ್ಮ ಪರೀಕ್ಷೆ)

1. "ಕನ್ನಡ ನಾಡೊಳು ಕಲಿಯುಗ ಪುಗದಿರ್ಕೆ" ಎಂದು ಹರಸಿದವರು ಯಾರು? (ಶ್ರೀಯುವರು? ಬೇಂದ್ರೆ? ಹೊನ್ನಮ್ಮ? ಹರಿಹರ? ವಿದ್ಯಾರಣ್ಯ?)

2. "ವಿದಿತಾಶೇಷ ಕಲಾಕಲಾಪ ಭುವನಾಲಂಕಾರ ಕಾದಂಬರೀ" ಎಂದು ನಾಗವರ್ಮ ಕವಿ ಹೊಗಳಿರುವುದು ಯಾವುದನ್ನ? (ಭರತೇಶ ವೈಭವ? ಸಾಹಿತ್ಯ ರತ್ನ? ರಾಜಶೇಖರ ವಿಳಾಸ? ಕಾದಂಬರಿ? ಮಾಡಿದ್ದುಣ್ಣೋ ಮಹರಾಯ?)

3. "ಅಂತಿಕ್ಕು, ಇಂತಿಕ್ಕು, ಎಂತಿಕ್ಕು ಎನಬೇಡ" ಎಂದು ಸರ್ವಜ್ಞ ಕವಿ ಹೇಳಿರುವುದಕ್ಕೆ ಕಾರಣವೇನು? (ಪ್ರಾಸದ ಅಭ್ಯಾಸ ಕೆಟ್ಟದ್ದು; ವ್ಯಾಕರಣ ಶುದ್ಧ ವಾಗಿಲ್ಲ; ಹೇಗಿಕ್ಕಿದರೇನು, ಮಹಾ? ಏನಿಕ್ಕುತ್ತಾರೆ ಎಂಬುದು ಆತನಿಗೆ ಗೊತ್ತಿತ್ತು, ಇಕ್ಕುವುದು ಪಾಪದ ಕೆಲಸ)

4. "ಗಂಗೆಯನು ಗಾಜ ಕುಪ್ಪಿಗೆಯೊಳು ತರಲು" ಅದು ಏನಾಗುತ್ತ ದೆಂದು ವೆಂಕಟಾರ್ಯ ಶಿಷ್ಯ ಹೇಳಿರುವನು? (ಗೆಡ್ಡೆ ಕಟ್ಟುವುದು; ಮೈಲಿಗೆಯಾಗು ವುದು; ನರಕವಪ್ಪುದು; ಗಂಗೆಯುಹುದು, ಇಂಗಿಹೋಗುವುದು).

5. "ಸುಪುತ್ರ ನೆನಿಸಿದಂ ಕವಿರತ್ನಂ"...ಯಾರು? (ಕೈಲಾಸಂ? ರನ್ನ? ರಾಜರತ್ನಂ? ರಬಕವಿ? ಕೇಶಿರಾಜ?)

6. "ಇನ್ನೇಕೆ? ಕವಿತ್ವ, ವಾದ, ತರ್ಕ, ಸಮಸ್ಯಂ? ಇನ್ನೇಕೆ ಬಲ್ ವಿಚಾರಂ" ಎಂದು ಕನ್ನಡಿಗರೊಬ್ಬರು ಕೊರಗಿದ್ದು ಯಾವಾಗ? (ಡಿಗ್ರಿ ಪಡೆದಾಗ? ಬೊಮ್ಮನಹಳ್ಳಿ ಕಿಂದರಿ ಜೋಗಿ ಪ್ರಕಟವಾದಾಗ? ಪಂಪ ಸತ್ತಾಗ? ತಾಳಿಕೋಟೆ ಯಾದಾಗ? ಬಳ್ಳಾರಿಯಲ್ಲಿ ಆಂಧ್ರ ಸಮ್ಮೇಲನವಾದಾಗ?)

7. "ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ"....ಯಾರು? (ಐರಾವಣ? ಚಾಣಕ್ಯ? ಸರ್ವಜ್ಞ? ಪ್ರಗತಿಸಾಹಿತಿ? ಗೌತಮಬುದ್ಧ?)

—ಶಾರಾಂತ.

(ಸರಿಯಾದ ಉತ್ತರಗಳಿಗೆ ಕಡೆಯ ಪುಟವನ್ನು ಓದಿ)

ವೇದಿಕೆಯ ಮೇಲಿಂದ

ಮೊನ್ನೆ ನಾನು ಒಂದು ವೇದಿಕೆಯನ್ನಲಂಕರಿಸಿದ್ದೆ. ಅಂದರೆ, ಅಚ್ಚ ಕನ್ನಡದಲ್ಲಿ ಹೇಳುವುದಾದರೆ, ಒಬ್ಬ ವೈದಿಕನಾಗಿದ್ದೆ. ನೀವು ಪೇಪರಲ್ಲೋದಿರಬಹುದು. ದಿವಾನ್‌ಬಹದ್ದೂರ್ ರಾವ್‌ಸಾಹೇಬ್ ಮುಂತಾದ ಮಾನ್ಯ ಮಹನೀಯರನಂತರ ಸಾಮಾನ್ಯ ಮಹನೀಯ ನನ್ನ ಹೆಸರೂ ಬಂದಿತ್ತು. ಭಾಷಣಕಾರ, ಭೀಷಣಕಾರ, ಅಧ್ಯಕ್ಷ, ಮಧ್ಯಕ್ಷ, ಸ್ವಕಾರ್ಯದರ್ಶಿ ಸ್ವಾಮಿಕಾರ್ಯದರ್ಶಿ, ಇವು ಯಾವುದೂ ಅಲ್ಲದಿದ್ದರೂ, ನಾನು ಆ ಮಹಾಭಾಗ್ಯಕ್ಕೆ ಗುರಿಯಾದೆ.

ಇದಕ್ಕೆ ನನ್ನ ಅಗಸನೇ ಕಾರಣ. ನಾನು ಕೊಟ್ಟಿದ್ದ ಸಾದಾ ಅಂಚಿನ ಜರಿ ರುಮಾಲಿಗೆ ಬದಲಾಗಿ ಅವನು ಎಲ್ಲೋ ಜ್ಞಾನದಲ್ಲಿ ಮೂರು ಚಿಟ್ಟಗೆಲದ ಭಾರಿ ಜರಿ ಪೇಟ ಒಂದನ್ನು ಮಡಿಮಾಡಿ ತಂದುಕೊಟ್ಟಿದ್ದ. ಅವನ ತಪ್ಪನ್ನು ಅವನಿಗೆ ತಿಳಿಸಿ ಮನನೋಯಿಸಲು ನಾನು ಒಡಂಬಡಲಿಲ್ಲ. ಅವನ ತಪ್ಪನ್ನೇ ತಲೆಯ ಮೇಲೆ ಹೊತ್ತು ತೆರಳಿದ್ದೆ. ನನ್ನ ಸಹಜಾಸನದ ಪಂಕ್ತಿಯಲ್ಲೇ ಹೋಗಿ ಕುಳಿತೆ. ಆದರೂ, ನನ್ನ ಕಿರೀಟಕ್ಕೆ ಬೆದರಿ, ಕಾರ್ಯದರ್ಶಿ ಮಹಾಶಯ ನನ್ನನ್ನ ವೇದಿಕೆಯ ಮೇಲೆ ಬರುವಂತೆ ಬಲವಂತಿಸಿದ.

ಹೋಗಿ ಕೂತೆ, ಉಪನ್ಯಾಸಕರ ಹಿಂಬದಿಯಲ್ಲಿ... ಸಭೆ ಎಂಬ ಯಜ್ಞಪಶು ಸಮೂಹವನ್ನು ನೋಡಿದೆ. ಒಂದು ದೇಶದ ಪುರುಷರನ್ನು ಕುರಿತು ತಿಳಿಯಬೇಕಾದರೆ, ಅಲ್ಲಿಯ ಸ್ತ್ರೀಯರನ್ನು ನೋಡು, ಎಂದು ಆಂಗ್ಲ ಲೇಖಕರೊಬ್ಬರು ಬರೆದಿರುವುದು ಜ್ಞಾಪಕಕ್ಕೆ ಬಂತು. ಸ್ತ್ರೀಯರನ್ನೂ ನೋಡಿದೆ...ಒಬ್ಬರ ಮುಖದಲ್ಲಾಗಲಿ ಗೆಲುವು ಚಟುವಟಿಕೆ ಹೊಳಪು ಹುರುಪು ಯಾವುದೂ ಕಾಣಿಸಲಿಲ್ಲ. ಖಾಲಿ ಕಣ್ಣುಗಳನ್ನು ಎತ್ತೆತ್ತಲಾಗೋ ತಿರುಗಿಸುತ್ತಾ ಆಕಳಿಕೆಯನ್ನು ನುಂಗುತ್ತಾ ಕುಳಿತಿದ್ದರು. ಹಲವರು ಕಾರ್ಯಕ್ರಮವನ್ನು ಓದುತ್ತಾ ಬಿಸುಸುಯ್ದರು. ಮತ್ತೆ ಹಲವರು ಟೌನ್‌ಹಾಲಿನ ಸೂರಿನ ರಚನೆಯನ್ನೇ ಸಂಶೋಧಿಸಿದರು. ಇನ್ನು ಕೆಲವರು ತಮ್ಮ ಮುಂದಿನ ಬಟ್ಟ ತಲೆಗಳನ್ನೋ, ಹೆಕ್ಕತ್ತಿನ ಮಡಿಕೆಗಳನ್ನೋ ಸೆರಗು, ವಲ್ಲಿಗಳ ಜರಿ ಅಂಚುಗಳನ್ನೋ ಕುತೂಹಲದಿಂದ ನೋಡುತ್ತ ಕಾಲಕಳೆದರು. ತಗಣೆ ಕಾಟದಿಂದ ಅನೇಕರ ಬುದ್ಧಿ ಮತ್ತೆತ್ತ ಕಡೆಗೂ ಹರಿಯಲೇ ಇಲ್ಲ. ಛೆ! ಇವರನ್ನೇ ಅಲ್ಲವೆ ಉಪನ್ಯಾಸಕರು ಇಷ್ಟರಲ್ಲೇ 'ಮಹಾಶಯರೆ!' ಎಂದು ಸಂಬೋಧಿಸುವುದು? ಇವರೇ ಅಲ್ಲವೆ ನಾಳೆ ದಿನದ ಪತ್ರಿಕೆಗಳಿಂದ "ಕಿಕ್ಕಿರಿದ ನಾಗರಿಕ ಶಿಖಾಮಣಿಗಳು" ಎಂದು ಹೊಗಳಿಸಿಕೊಳ್ಳುವರು? ನಾನು ನನ್ನ ಮನಸ್ಸಿನಲ್ಲೇ ವಿನಯ, ಮರ್ಯಾದೆ, ಸಭ್ಯತೆ, ಇವುಗಳನ್ನು ನಾನಾ ರೀತಿಯಾಗಿ ಬೈದು ಸಮಾಧಾನ ಪಡೆದೆ.

ಆಗ ನನಗೆ ನಾಚಿಕೆಯಾಯಿತು. ಅವರಂತೆ ನಾನೂ ಕೂಡ ಉಪನ್ಯಾಸವನ್ನು ಕಿವಿಗೆ ಹಾಕಿಕೊಳ್ಳದೆ ಇದ್ದರೆ, ನಾನು ವೇದಿಕೆ ಹತ್ತಿದ್ದು ವ್ಯರ್ಥ ಎಂಬ ಅರಿವಾಯಿತು. ನನ್ನ ಗಮನವನ್ನೆಲ್ಲ ಆತನ ವಾಕ್ ಪ್ರವಾಹದ ಕಡೆ ತಿರುಗಿಸಿದೆ. ಆದರೆ, ಉಪನ್ಯಾಸಕರ ಬೆನ್ನನ್ನು ಮಾತ್ರ ನೋಡುತ್ತ ಅವರ ಮಾತುಗಳನ್ನು ಅರ್ಥಮಾಡಿಕೊಳ್ಳುವುದು ಬಹು ಪ್ರಯಾಸದ ಕೆಲಸ. ಕನ್ನಡದ ಅವನತಿ, ಮೈಸೂರಿನ ಪ್ರಗತಿ.... ಯನ್ನು ಕುರಿತು ಅವರು ಹೇಳುತ್ತಿರಬಹುದು. ಆದರೆ, ನನ್ನ ಮಟ್ಟಿಗೆ, ಅವರ ಉಲ್ಲನ್ ಕೋಟಿನಲ್ಲಿ ಹುಳ ಹೊಡೆದು ಕೊರೆದಿರುವ ನಾಲ್ಕಾರು ತೂತುಗಳು, ಅದರಿಂದ ಹೊರಬರುವ ನಾಪ್‌ತಲೀನ್ ವಾಸನೆ, ಅವರ ಪೇಟದ ಹಿಂದಿನ ಗಂಟು ಸಡಿಲವಾಗುತ್ತಿರುವ ಸ್ಪೀಡು, ಇವೇ ಮನಸ್ಸನ್ನು ಸೆಳೆದುಬಿಟ್ಟಿತ್ತು. ಅವರ ಗುಂಡಾದ ಮೂಗಿನ ಮೊಂಡು ತುದಿಗೂ ಅವರ ಕಿವಿಯಂಚಿನ ಕೂದಲು ಸಾಲಿಗೂ ನಡುವೆ ಹಾರಿ ಹಿಂಸಿಸುವ ಒಂದು ನೊಣದ ತುಂಟತನವನ್ನೇ ನಾನು ನೋಡುತ್ತ ಕುಳಿತಿದ್ದೆ. ಕಡೆಗೆ, ಇನ್ನೆಷ್ಟುಹೊತ್ತಪ್ಪ ಈತನ ಪತ್ರ ಹಿಂಸೆ ಎಂದುಕೊಂಡು ಒಂದುಸಲ ಸೊಗಸಾಗಿ ಆಕಳಿಸಿದೆ.

ಆಕಳಿಸಿ ಬಾಯಿ ಕೂಡಿಸಿದಾಗ, ನನಗೆ ಮತ್ತೊಂದು ಸಲ, ಸಭೆ ಕಾಣಿಸಿತು. ಅವರಲ್ಲೂ ಹತ್ತಾರು ಮೊಸಳೆಗಳು ಆಗತಾನೆ ಆಕಳಿಸುತ್ತಿದ್ದರು. ಇತರರು ಕುರ್ಚಿಗಳ ಒಳಭಾಗದಲ್ಲೇ ಮೈಮುಡಿಸಿ ನಿದ್ದೆಗೆ ಸಿದ್ಧವಾಗುತ್ತಿದ್ದರು. ಅವರಲ್ಲೊಬ್ಬ ತೇಲುಗಣ್ಣಿಂದ ನನ್ನನ್ನೇ ದುರುಗುಟ್ಟಿ ನೋಡುತ್ತ ಪಕ್ಕದವನ ಹತ್ತಿರ ಏನೋ ಪಿಸುರಿನಕ್ಕ ...ತಕ್ಷಣ, ನಾನು ನನ್ನ ಮುಖಮುದ್ರೆ ಬದಲಾಯಿಸಿ ಭಾಷಣಕಾರರ ಬೆನ್ನ ಮೇಲೆ ದೃಷ್ಟಿ ಬಡಿದೆ. ಅವರು ಆಗ ತಾನೆ ಯಾವುದೋ ಹಾಸ್ಯಕಥೆಯನ್ನು ಹೇಳಿ ಮುಗಿಸಿ ಕರತಾಡನಕ್ಕಾಗಿ ಕಾದಿದ್ದರು. ಎಚ್ಚರವಾಗಿದ್ದವರ ಪೈಕಿ ಹಲವರು ಹಲ್ಲು ಕಿರಿದರು. ಆದ್ದರಿಂದ, ಆ ಕಥೆ ಅವರಿಗೆ ತಂಗಳಾಗಿದ್ದಿರಬೇಕೆಂದು ನಾನು ಊಹಿಸಿದೆ. ಎರಡು ನಿಮಿಷಗಳ ತರುವಾಯ ಮೂರನೆಯ ಸಾಲಿನ ಮಹನೀಯರೊಬ್ಬರು ಇದ್ದಕ್ಕಿದ್ದ ಹಾಗೆ ಘೊಳ್ಳೆಂದು ನಕ್ಕರು. ಕಥೆ ಆತನಿಗೆ ಆಗ ಅರ್ಥವಾಗಿರಬೇಕು. ಅವರ ಅಕ್ಕಪಕ್ಕದವರೆಲ್ಲರೂ ಅವರ ಮೇಲೆ ಕಿಡಿಕಾರಿದರು.

ವೇದಿಕೆಯ ಮೇಲೆ ಪೀಠ ಸಂಪಾದಿಸಿದ ಮೇಲೆ ಶ್ರೀಮದ್ ಗಾಂಭೀರ್ಯದಿಂದ ಕಷ್ಟಕಡೆಯತನಕ ಕುಳಿತಿರಬೇಕಾದದ್ದೇ ಸಭಾ ಮರ್ಯಾದೆ. ಆದರೆ, ಅದೊಂದು ಘೋರತಪಸ್ಸು. ಅದನ್ನನುಭವಿಸಿದವರೇ ಬಲ್ಲರು.

ರೇವಣ್ಣ.

ಕ್ರಿಕೆಟ್ ಗಾದೆಗಳು

ಸೀ. ಎಸ್. ನಾಯುಡು, ಮಾ ಮಾನ ಕಾಯುಡು.

* * *

ಮರ್ಚಂಟ್ ಕ್ಯಾಪ್ಟನಾದರೆ, ವಿಜಯಾನೂ ಸಿದ್ಧ.

* * *

ಹಿಂದೆ ನಿಲ್ಲೋ ಹಿಂಡ್ಲೇಕರ್, ಮುಂದೆ ಬಂದರೆ ಮೂವತ್ತು ರನ್ನು.

* * *

ಪಟ್ಟು ಹಿಡಿದರೆ, ಪಟ್ಟೋಡಿ, ಮುಟ್ಟಿದ್ದೆಲ್ಲ ರನ್ನು.

* * *

ಹಜಾರೆ ಬಂದರೆ, ಮಜಾ ! ರೆ !

* * *

ಮಹಮ್ಮದ್–ಫೀಲ್ಡಲ್ಲಿದ್ದರೆ, ಹೊಡೆದವನ ಮನಸ್ಸು ಗುಲ್ಲುಗುಲ್ಲಗೆ

* * *

ಸರ್ವಾಟೆ ಇಳಿದರೆ, ಸರ್ವಾರ್ಥ ಸಿದ್ಧಿ

* * *

ಸಿಂಧೆ ಸ್ಪಿನ್ನಿದರೆ, ರನ್ನಿಗೇ ಸೊನ್ನೆ

* * *

ಕಷ್ಟಕಾಲಕ್ಕೆ ಮುಷ್ಟಕಾಲಿ.

* * *

ಮೋಡಿ ಮೋಡಿ ಹಾಕಿದರೆ, ಗಾಡೇಗತಿ.

* * *

ಆಲ್ ರೌಂಡರ್ ಬಾನರ್ಜಿ, ಆಳೂ ಕೂಡ ರೌಂಡ್ ರೌಂಡೇ.

* * *

ಸಪೀಗಿಂತ ಹಫೀಸಿಗೆ ಹಾನೀ ಹೆಚ್ಚು !

* * *

ಅತಿರಥ ಮಹಾರಥರೆಲ್ಲ ಅಮರನಾಥನಿಗೆ ಆಪೋಶನ.

* * *

ಸಂಕಟ ಬಂದರೆ, ಮಂಕಡ, ಬಾರೋ.

* * *

ಬ್ಯಾಟಿಡೋ ನಿಂಬಾಲ್ಕರ್, ಅಂದರೆ, ಬೌಲ್ ಮಾಡೋ ಭೂಪ, ಅಂದ.

* * *

ಸೋಹೋನಿ, ಓಹೋ, ಅಂದರೆ, ಬಿಕ್ಕಟ್‌ನಲ್ಲೂ ವಿಕ್ಕಟ್ಟು.

—ಪಾರ್ಥ.



1 2 ೩

ಕೇಳಿಕೆ—ಹೇಳಿಕೆ

ನಿಮ್ಮ ನಾಡಾವುದು ?

—ನನ್ನ ಧರ್ಮವ ಕೇಳು.

ನಿಮ್ಮೂರದವಾದು ?

—ನನ್ನ ಮತ ತಿಳಿಯದೆ ?

ಜಗಕೆಲ್ಲ ಕಣ್ಣದು

—ಇನ್ನು ಹೊಗಳುವೆ ಏಕೆ ?

ಎಮ್ಮ ಮೈ ಮಣ್ಣದು

—ಬರಿಯ ಬಿಂಕದ ಮಾತು !

ಮಂಗಳದ ಬೀಡದು

—ನನಗೆ ಬೇಡದ ಬೀಡು !

ಶಾಂತಿ ನೆಲೆ ವೀಡದು

—ಹಿರಿಯ ಭ್ರಾಂತಿಯ ಗೂಡು !

ಸವಿ ಸೊಗದ ನಾಡದು

—ಹಳೆಯ ಹೊಂಗನಸದು !

ಎರಡಾಗ ಕೂಡದು

—ಬರಡಾದ ಕೂಗದು !

[ಇದರಲ್ಲಿ ಯಾರನ್ನೂ ಸೂಚಿಸಿಲ್ಲವೆಂಬುದು ವಾಚಕರಿಗೆ ವೇದ್ಯವಾಗದಿರದು]



4

ಹವ್ಯಾಸಂಗ

ಎಳ್ಳಿಲ್ಲದ ಗಾಣವನಾಡಿಚ ಎತ್ತಿನಂತಾಯ್ತೆಮ್ಮ ವಿದ್ಯೆ. ಮಲ್ಲಿಲ್ಲದ ಮಳಿಗೆಯ ಮುಂದಿನ ಕ್ಯೂವಿನಂತಾಯ್ತೆಮ್ಮ ವಿದ್ಯೆ. ಮುಳ್ಳಿಲ್ಲದ ಬೇಲಿಯೊಳಗೆ ಮಾಡಿದ ಬೇಸಾಯದಂತಾಯ್ತೆಮ್ಮ ವಿದ್ಯೆ. ಅಕಟಕಟಾ! ಚರಿತ್ರೆಯನೋದಿದರೂ ಚಾರಿತ್ರ್ಯದ ವೋದವಿಲ್ಲ. ಗಣಿತವನೋದಿಯೂ ಗಣ್ಯತೆಯ ಪಡೆಯಲಿಲ್ಲ. ತರ್ಕವ ನೋದಿಯೂ ಎಲ್ಲಿಯುಂ ವರ್ಕಿಲ್ಲ. ಕಾವ್ಯವ ಪಠಿಸಿ ಪಠಿಸಿ ಕಾವು ಹತ್ತಿಲ್ಲ. ಗದ್ಯವ ನೋದಿಯೋದಿ ಸದ್ಯಕ್ಕೆ ಗತಿಯೇನಾಸ್ತಿ. ಅರ್ಥಶಾಸ್ತ್ರ, ತತ್ವಶಾಸ್ತ್ರ, ಮನಶ್ಶಾಸ್ತ್ರ, ಕನಶ್ಶಾಸ್ತ್ರ ಎಲ್ಲವೂ ಆಯಾಯಾ ಮಾಸ್ತರ ಜೀವನ ಸೂತ್ರವಯ್ಯ. ಇಪ್ಪತ್ತು ತುಂಬಿದರೂ ಒಪ್ಪತ್ತಿಗನ್ನವಿಲ್ಲ. ಎಪ್ಪತ್ತು ತುಂಬಿದರೂ ಚಿಪ್ಪೆತ್ತಿ ತಿರುಗುವರಯ್ಯ. ನೋಡಿದಳು, ನೋಡಿ ಮರುಗಿದಳು, ನಮ್ಮ ಕೊರವಂಜಿ ಕಾಯುವಪರಂಜಿದೇವಿ.

ಇಪ್ಪತ್ತರ ಕನಸು

.......ದೇವರು ದಯಮಾಡಿ ಕರುಣಿಸಿಬಿಟ್ರೆ, ನಾನು ಆಫೀಸ್ ಕೆಲಸ ಮುಗಿಸಿ ಕೊಂಡು, ಮನೆಗೆ ಬಂದು, ಮಲ್ಲಿಗೆ ಅರಳ್ತಿರೋ ನನ್ನಂಗಳದಲ್ಲಿ, ಈಸಿಚೇರ್ ಮೇಲೆ ಕಷ್ಟದಿಂದ ಕೂತು ಪೇಪರನ್ನು ಕೈಯಲ್ಲಿಡಿದು ಓದುವವನಂತೆ ನಟಿಸಿ, ಮಧ್ಯ, 'ಲೇ ! ನನ್ನಿಣಿ !'.. ಥೂ ! ಡೊಂಕು ಮೂಗಿನ ಗಿಣಿಯೆಂದೇಕೆ ಅನ್ನಬೇಕು ಅವ ಳನ್ನ ?....ಸ್ವೀಟ್ ? . .ಥೂ, ಅದೂ ಪ್ರಯೋಜನವಿಲ್ಲ. ಪಾಕಂಪಪ್ಪು ಕೂಡ, ಸ್ವೀಟೀ .. ಡಾರ್ಲಿಂಗ್ ? ...ಇದೇನು ಹಾಳು ...ಆ ರಂಗು ಮುಸುಡಿಗಳು ಬಳಸೋ ಹೆಸರೇ ಬರುತ್ವೆ ಬಾಯ್ಗೆ....ಇದೆಲ್ಲ ಅಸಹ್ಯ....ಹೆಸರು ಸಿಂಪಲ್ ಆಗಿರಬೇಕು, ರೊಮ್ಯಾನ್‌ಟಿಕ್ ಆಗೂ ಇರಬೇಕು... ಸುಶೀಲ, ಕಮ್ಲಿ, ಲಲ್ತಾ, ಪದ್ಮಾಕ್ಷಿ....ಛೆ ! ಅಕ್ಷಿದ್ರಾಕ್ಷಿ ರುದ್ರಾಕ್ಷಿ ಬಕಪಕ್ಷಿ....ಕೇಳಿ ಕೇಳಿ ಬೇಜಾರಾಗಿ ಹೋಗಿದೆ ...ಲತೆಗಳು ಬೇರೆ ಜತೆಗೆ....ಸ್ನೇಹಲತೆ ಕೋಮಲತೆ ದಲಿತೆ ಬಲಿತೆ ಅಂತ ನೂರೆಂಟು....ಏನ್ಹಾ ದರೂ, ಪೂರ್ವದ ಹೆಸರೇ ಚೆನ್ನ ! ದಿವ್ಯ. ನಿಜವಾಗಿಯೂ ಭವ್ಯತರ "ಗೌರಿ" ಎಷ್ಟು ಮುದ್ದಾದ ಹೆಸರು, ಕೂಗಿದ ತಕ್ಷಣ ತುಂಬುನಗೆ ತುಂಬುಮೈ ಬೊಗಸೆಗಣ್ಣು ಬೆಪ್ಪುನೋಟ ಮನಗಣ್ ಮುಂದೆ ಬಂದು ನಿಲ್ಲುತ್ತೆ...'ಲಕ್ಷ್ಮಿ'....'ಆ್ಹ' ಎಷ್ಟು ತುಂಬು, ಹೆಸರಿನಲ್ಲಿ....ಏನು ಪ್ರವಾಹ ಅದೆಲ್ಲ ಯಾಕೆ ಈಗ ? ಅಂತೂ, ಯಾವುದೋ ಒಂದು " ಬಗೆಗೆ ಒಲಿಯುವ....ಕರೆಯಲ್ ಸೊಗವೀವ....ಚೆಲ್ವಾಂತ" ಒಂದು ಪೆಸರಂ ನಾನಿಟ್ಟು ಅದನ್ನೇ 'ಮುದದಿಂ' ಕೂಗಿ, ಅವಳು....ಅಂತಪ್ಪ ಪೆಸ ರಾಂತ ಅವಳು ನನಗೆ ಕಾಫೀ....ಥೂ ! ಇನ್ನು ಮೇಲಾದರೂ ಕಾಫಿ ಬಿಟ್ಟುಬಿಡ ಬೇಕು....ಟೀ .. ಥೂ ! ಅದೂ ಅದ್ರಣ್ಣನ ಹೆಂಡತಿ....ಹೋಗಲಿ ನಿಂಬೆಹಣ್ಣಿನ ಪಾನಕ ? ಅಯ್ಯೋ ! ಸಾಯಂಕಾಲದ ಹೊತ್ತಿನಲ್ಲಿ ತಣ್ಣಗೆ ಪಾನಕಾನೇ ?.... ಹ್ಞೂಂ....ಅದೆಲ್ಲ ಇರಲಿ ಯಾವುದೋ ಒಂದು ತತ್ಸಮಯಕ್ಕೆ ತಂದುಕೊಡೋಕೆ ಬಂದರೆ,...."ಬಾ ! ಇಲ್ಲಿ. ನಿನಗೊಂದು ಗುಟ್ಟು ಹೇಳ್ತೀನೆ, ಛಾರಿಗುಟ್ಟು !" ಎಂದು ಕರೆದು........ಆಗ, ಅವಳ ಹುಸಿಕೋಪ ! ಆಗೇನಾದರೂ ನನ್ನ ಹತ್ರ ಒಂದು ಬಫ್ ಕಾಗದದ ಬಂಡ್ಲು, ಒಂದು ಇಂಕಿಯುಲ್ಲದ್ದಿದ ಲೇಖಣಿ ಇದ್ದುಬಿಟ್ಟಿದ್ದರೆ, ಅದನ್ನೇ ಹೃದಯಂಗಮವಾಗಿ ....

—ಬರಹದಿಂಚ 'ಶಶಿ'ಯು.

—● ನಾನೂ ನನ್ನ ಕುದುರೆಯೂ ●—

—— o ——

ಇಪ್ಪತ್ತು ವರ್ಷದಿಂದ ಹೊಡಿಯುತ್ತಾ ಇದ್ದೇನೆ, ಸಾಮಿ, ಗಾಡೀನ. ಅಯ್ಯೋ, ಅಯ್ಯೋ, ಅಯ್ಯೋ! ಎಂಥೆಂಥ ಜನ ಇದಾರೆ, ಅಂತೀರಿ, ಈ ಬೆಂಗಳೂರಲ್ಲಿ? ಅಲ್ಲಿ ಕೂರಿಸಿ ಇಲ್ಲಿ ಇಳಿಸುವುದರೊಳಗೆ ಅವರು ಆಡೋ ಆಟ, ಮಾಡೋ ಮಾಟ....ಥೆ! ಥೆ! ಥೆ! ಒಬ್ಬರೇ ಕೂತಿದ್ದರೆ, ಸೂಟಿನವರು, ಕರೀದೊರೆಗಳು, ತಲೆತಗ್ಗಿಸಿಕೊಂಡು ಬಿಂ ಅಂತ ಬಿಗಿ ಮೇಲಿರುತ್ತಾರೆ, ತಿರುಗಬೇಕಾದ ಕಡೆ ಕೂಡ ತುಟಿ ಅಲ್ಲಾಡಿಸೋದಿಲ್ಲ ಕಡೆಗೆ ಇಲ್ಲಿಗೇಕೋತಂದೆ ಅಂತ ನಮ್ಮ ಮೇಲೆ ಇಂಗ್ಲೀಷು ಬಿಡುತ್ತಾರೆ. ರುಮಾಲಿನವರಾದರೆ ಅತ್ತಕಡೆ ಇತ್ತಕಡೆ ಅಂತ ಎರಡು ಮುತ್ತು ಉದುರಿಸುತ್ತಾರೆ. ಗಾಂಧಿಟೋಪಿಯವರು ಬಿಡಿ–ಸದಾ ನಮ್ಮ ಬೆನ್ನು ಕೆರೆಯುತ್ತಾ ಉದ್ದಕ್ಕೂ ಹುರುಳಿ ಬೆಲೆ, ಸಾಹುಕಾರರಿಗೆ ಕೊಡೋ ಬಾಡಿಗೆ ಪೋಲೀಸಿನವರಿಗೆ ಕೊಡೋ ನಜರು ಅಂತ ಕಷ್ಟನಷ್ಟ ವಿಚಾರಿಸಿ ಕುದುರೆ ಎಲುಬೆಲ್ಲ ಎಣಿಸುತ್ತಾರೆ. ಅಂಥಾವರು ನಿಟ್ಟುಸಿರು ಬಿಟ್ಟುಕೊಂಡು ಚಿಲ್ಲರೆ ಇಲ್ಲವಲ್ಲೋ ಅಂತ ತಲೆ ಕೆರೆದರೆ, ತಣ್ಣಗಿರಪ್ಪ ಮಾರಾಯ ಅಂತ ನಾನೂ ತೆಪ್ಪಗಾಗುತ್ತೇನೆ.

ಗಂಡ ಹೆಂಡತಿ ಕೂತುಬಿಟ್ಟರೆ, ಒಸಗೆಯಾದ ಹೊಸದರಲ್ಲಿ, ಪಕ್ಕೆಚುಚ್ಚಿಕೊಂಡು ಕಲಕಲ ಅಂತ ದಾರಿ ತುಂಬ ನಕ್ಕಿದ್ದೂ ನಕ್ಕಿದ್ದೆ. ಪಾಪ, ಎಷ್ಟು ದಿನ ನಕ್ಕಾರು. ನಾನೂ ಕೂಡ ಅವರನ್ನ ಮುಂಭಾರ ಹಿಂಭಾರ ಅಂತ ಪೀಡಿಸೋದಿಲ್ಲ. ನನ್ನ ಷಾದೀ ವ್ಯಾಧಿ ನೆನೆದುಕೊಳ್ಳುತ್ತಾ ಅವರ ಲಲ್ಲೆ ಕಿವಿ ಮೇಲೆ ಬೀಳದೆ ಇದ್ದವನ ಹಾಗೆ ನನ್ನ ಪಾಡಿಗೆ ನಾನು ಕುದುರೆ ಬಾಲ ತಿರುಚುವೆ. ಮೂವತ್ತು ಮೂವತ್ತೈದರ ಕಪೋತ ಕಪೋತಿಯರಾದರೆ ಸರಿ, ಮಾತಿನಲ್ಲಿ ಗೆಲುವೇ ಇರೋದಿಲ್ಲ. ಮಕ್ಕಳ ನಾಯಿಕೆಮ್ಮಲು ಬೇರೆ. ಸಾಲ ಸಂಬಳ ವರ್ಗ ಜಾತಕ ಸೌದೆ ತಾಯಿತೆ ಬಾಡಿಗೆ ಅಂತ ಒಳಗೆ ಕೂತುಕೊಂಡು ಒಟಗುಟ್ಟುತ್ತಾರೆ. ಸರ್ಕಾರ ಸಾಹೇಬರು ಅಂತ ಗೊಣಗುಟ್ಟುತ್ತಾರೆ. ಅತ್ತೆ ಸೊಸೆ ಹತ್ತಿಬಿಟ್ಟರಂತೂ, ಗಾಡಿ ಗಾಡೀನೇ ಮುಗುಚಿಹೋಗುತ್ತೆ, ಅವರು ಆಡೋ ಛೀಮಾರಿಯಿಂದ, ಜೊತೆಗೆ ಹೆಂಗಸರಿದ್ದರೆ, ಗಂಡಸರು ನಮಗೆ ಕೊಡೋದು ಹೇಳದಷ್ಟೇ ಬಾಡಿಗೆ....ಅವರೆದುರು ತಮ್ಮ ಜಾಣತನ ತೋರಿಸೋದಕ್ಕೆ ಅಂತ, ಗಂಡಸರು ದಾರಿ ಉದ್ದಕ್ಕೂ ಲೈಸನ್ಸು ಮುನಿಸಿಪಲ್ ಲಿಸ್ಟು ಪೋಲೀಸು ಮಾಮೂಲು ಅಂತ ಬೆದರಿಸುತ್ತಾರೆ. ಅದಕ್ಕೆ ನಾವೂ ಉಪಾಯಮಾಡುತ್ತೇವೆ: ಸ್ಟೇಷನಿಂದಲೇ ಪ್ರಾರಂಭಿಸುತ್ತೇವೆ, ನಮ್ಮ ಪುರಾಣಾನ. "ಇಂಥದ್ದೇ ಒಂದು ಮಗಳಿದ್ದಳು, ತಾಯಿ, ನನಗೂನೂ. ಇಸ್ಕೂಲಿಗೆ ಕಳಿಸ್ತಾ ಇದ್ದೆ, ತಾಯಿ.... ಈಗ ಬದುಕಿದ್ದರೆ ನಿಮ್ಮ ಹಾಗೆ ಅವಳೂನೂ ಗಂಡನ ಜೊತೆಗೆ ಮೂರು ಮಕ್ಕಳನ್ನೂ ಕಟ್ಟಿಕೊಂಡು ಅತ್ತೆ ಮನೆಗೆ ಹೋಗುತ್ತಿದ್ದಳು....ಈ ಮಗುವಿನಷ್ಟು ಇದ್ದಾ

ಗಲೇ ಹುರುಳಿ ಬೇಯಿಸುವಳು. ಅವಳ ಕೈಗುಣದಲ್ಲಿ ಕಲ್ಲೂಕೂಡ ಬೆಂದು ಬೆಣ್ಣೆ ಹಂಗಾಗುವುದು. ಈ ಕುದುರೆ ಮೇಲೇನೇ ಕೂರಿಸಬೇಕಪ್ಪ ನನ್ನ ಗಂಡನನ್ನ ವರ ಪೂಜೇಲಿ ಅಂತ ಅನ್ನೋಳು. ಹೊರಟುಹೋಗಿಬಿಡ್ತು'' ಅಂತ ಕಣ್ಣೊರಸಿಕೊಂಡು ಕನ್ನಡಿಯಲ್ಲೇ ಕೊರಗುವೆ....ನಾಲ್ಕಾಣೆ ಹೆಚ್ಚಾಗಿ ಕೊಡಿ, ಪಾಪ, ಒಳ್ಳೇವನು, ಅಂತ ಅನ್ನೋರು, ತಾಯಿ. ನಾನೇ ಮಗೂನ ಗಾಡಿಯಿಂದಿಳಿಸುವೆ.

ಥರ ಥರಾ ಜನರು ಕೂತಿದಾರೆ, ಸಾಮಿ, ಈ ಗಾಡೀಲಿ, ತಮ್ಮ ತಮ್ಮ ಭಾವ ಮೈದ ಅಳಿಯ ಸೋದರಳಿಯ ಇವರಿಗೆ ಒಳ್ಳೇ ಹುಲ್ಲು ತಿನ್ನಿಸಿ ಮಾಲೀಸ್‌ಮಾಡಿ ಜೀನೀಸ್ ಹಾಕಿ ಜೊತೆಯಲ್ಲೇ ಕೂರಿಸಿಕೊಂಡು, ಮೂರು ನಾಲ್ಕು ತಟ್ಟೆ ತುಂಬ ಸೇಬು, ದ್ರಾಕ್ಷಿ, ಕಿತ್ತಲೆ ಮೊದಲ ದಿಂಡಿನಹಾರ ಸಮೇತ ಚಾಕರಿ ಕೊಡಿಸಪ್ಪ ಅಂತ ಹಲ್ಲು ಕಿರೀತಾ ಭಾರಿ ಭಾರೀ ಸಾಹೇಬರ ಬಂಗಲಿ ಮುಂದಕ್ಕೋಡಿಸುತ್ತಾರೆ. ನನ್ನ ಗಾಡಿ ನಶೀಬಿನ ಗಾಡಿ, ಸಾಮಿ! ಮಂತ್ರಿ ಚಾಕರಿ ಕೂಡ ಕೊಡಿಸಿಕೊಡುತ್ತದೆ, ಇವತ್ತು ನರೀಮುಖ ಕಂಡೇಕಾಣುತ್ತೀರಿ, ಒಂದು ಕಿತ್ತಲೆಹಣ್ಣಾ ಕೊಡಿ ಖಾಯಿಲೆ ಮಗು ಇದೆ ಮನೇಲಿ, ಅಂದ್ರೆ, ಕೊಟ್ಟೇಕೊಡೋರು. ಆ ಮೇಲೆ, ಹೊರಗೆ ಬಂದು ಮತ್ತೆ ಹತ್ತುತ್ತಲೂ, 'ಆ ಪಾಪಿಗೆ ಕೊಟ್ಟದ್ದನ್ನ ನಿನಗಾದರೂ ಕೊಟ್ಟಿದ್ದರೆ, ಪುಣ್ಯ ಬರುತ್ತಿತ್ತು' ಅಂತ ಬಂಗಲಿಯವರನ್ನ ಬೈಬಾರದ ಮಾತಿನಲ್ಲೇ ಬೈಯುವರು. ಕಡೆಗೆ ಛತ್ರದಹತ್ರ ಬಾಡಿಗೆಗೆ ತಕರಾರು, ಪಂಚಾಯಿತಿ, ಚೌರ.

ಎಷ್ಟೋ ಸಲ, ನಾವೇ ಬಾಡಿಗೆ ಬಿಟ್ಟುಬಿಡುತ್ತೇವೆ ಆಸ್ಪತ್ರೆಗೆ ಅಂತ ಹೋಗುವಾಗ, ಬೇರೆ ಕಡೆ ತಿರುಗಿಸೋ ತಾಪತ್ರಯ ಬಂದರೆ, ಏನು ಕೇಳೋದು, ಯಾರ ಹತ್ರ ಕೇಳೋದು? ನಮ್ಮ ನಶೀಬು ಅಂತ ಕೊರಡಾದಿಂದ ಕುದುರೆ ಬೆನ್ನಮೇಲೆ ನಾಲ್ಕು ಚಚ್ಚಿಕೊಳ್ಳುವೆ.. ಮೊನ್ನೆ ಯಾವುದೋ ಮುತ್ತೈದೆ. ಗಂಡ ಬೇರೆ ಕೂತಿದ್ದ ಪಕ್ಕದಲ್ಲಿ ನೀವು ಬೇರೆ ಮದುವೆಮಾಡಿಕೊಳ್ಳಿ. ಒಂಟಿಯಾಗಿ ಇರೋದು ಅಪಾಯ. ಮಾತುಕೊಡಿ ನನಗೆ, ಈಗಲೇ, ಅಂತ ಹಠ ಹಿಡಿದರು. ಭೂಪ, ಕೊಟ್ಟ ಮಾತು. ಇನ್ನು ಕೆಲವರಿದಾರೆ. ನಂಟರ ಮನೆಗೆ ಬರುವವರು, ಬಸ್ ಸ್ಟಾಂಡಿಂದ. ಬಾಡಿಗೆ ತೆತ್ತು ನಮ್ಮನ್ನತ್ತಲಾಗೆ ಕಳಿಸಿ ಕಾಲು ತೊಳಿಯದೆ, ಚೀಲ ಚೊಂಬು ಹಿಡಿದು ನೆಟ್ಟಗೆ ಆ ಮನೆಗೆ ನುಗ್ಗಿಬಿಡ್ತಾರೆ. ನಾವು ಕಣ್ ಕಣ್ ಬಿಡ್ತಾ ಕಿಟಕಿಯಿಂದ ಇಣಿಕಬೇಕು ಒಳಗೆ ಮಾರಾಮಾರಿ ಆಗ್ತಿರ್ತದೆ. 'ನಿಮಗೆ ಭಾಗ ಕೊಡೋದಿಲ್ಲ' 'ನೀವು ಉಡುಗೊರೆ ಕೊಟ್ಟ ಸೀರೆ ಬಣ್ಣ ಹೋಯಿತು', 'ನಮ್ಮಮನೆ ಹೆಣ್ಣನ್ನ ಭಾವಿಗೆ ತಳ್ಳುತ್ತೇವೆ', 'ನಿಮಗೆ ಕಾಗದ ಬರೆದದ್ದು ನಾವಲ್ಲ, ನಮ್ಮ ಚಿಕ್ಕಪ್ಪ' ಅಂತ ರಾಮಾಣ್ಯ ತೆಗೆಯುತ್ತಾರೆ. ಸರಿ! "ಕೇ. ಪಿ. ಸಿ. ಆಫೀಸಲ್ಲೇ ಬಿಟ್ಟುಬಿಡೋ ಅಣ್ಣಾ'' ಅಂತ ಕೂಗಾಡಿಕೊಂಡು ಆತ ಹೊರಗೆ ಬರುತ್ತಾನೆ. ಕೊಂಕುಳಲ್ಲಿ ಪುಟ್ಟ ಕೂಸು, ಕೈಯಲ್ಲಿ ಬಟ್ಟೆಚೀಲ ಸಹಿತ ಆಕೇನೂ ಬರುತ್ತಾಳೆ''. ಯಾವ ಜಾತಿಯ

ವರು, ಸಾಮಿ, ಇವರು ?" ಅಂತ ಸಮಾಧಾನ ಹೇಳಿಕೊಂಡು ನಾನು ಮತ್ತೆ ಅದೇ ಜಾಗಕ್ಕೆ ಬಿಟ್ಟಿಹೊಡೆಯುವೆ.

ಯುದ್ಧ ನಿಂತದ್ದರಲ್ಲಿ ನಮಗೆ ಸಮಾಧಾನವೇ ಇಲ್ಲ. ಆಗ ಒಂದು ದಿನ ನಾಲ್ಕು ಜನ ಬಂದರು, ಚೌಕಕ್ಕೆ. ಐದು ರೂಪಾಯಿ ಬಾಡಿಗೆ, ಅಂದೆ. ತಕೊ ರಾಜ, ಅಂತ ಒಳಗೆ ತೂರಿಕೊಂಡರು. ನಾಲ್ಕು ಜನರಿಗೂ ಕಂಠಪೂರ್ತಿ, ಹೆಡ ಚಾವಟಿ ಚಿಳೀರ್ ಚಿಳೀರ್ ಅಂತ ಸದ್ದು ಮಾಡುತ್ತಲೇ ಇರಬೇಕಾಗಿತ್ತು ಅವರಿಗೆ. ಅಯ್ಯೋ ಹಯಗ್ರೀವಾ! ಅಂತ ಒಳಗೆ ಕುದಿಯುತ್ತಾ, ನಾನು ಬೀರುತ್ತಲೇ ಇದ್ದೆ. ಇದ್ದಕ್ಕಿದ್ದ ಹಾಗೆ ಅವರಿಗೆ ಕನಿಕರ ಹುಟ್ಟಿತು. ಯಾಕೆ ಹೊಡೀತಿಯಾ ಕುದುರೇನ, ಅಂತ ನನ್ನನ್ನ ಬೈದರು. ನಾಲ್ಕು ಜನರೂ ಕೆಳಕ್ಕಿಳಿದರು. ಕುದುರೆಯನ್ನ ಬಿಚ್ಚಿ ಒಳಗೆ ತುರುಕಿದರು. ನನ್ನನ್ನೂ ಅದರ ಹತ್ರ ಕೂರಿಸಿದರು. ತಾವೇ ಗಾಡೀನ ಎಳೆದು ಮುಂದಕ್ಕೆ ಸಾಗಿಸಿದರು—ತೂರಾಡುತ್ತಾ ಪೂರಾಡುತ್ತಾ, ತಮ್ಮ ಬಿಡಾರದ ತನಕ ಅಲ್ಲಿ ಕೂಲಿಯ ಮಾತು ಬಂದಾಗ—ನಾನು ಐದು ರೂಪಾಯಿ, ಅಂದೆ. ಸರಿ, ಎಂದು ಒಬ್ಬೊಬ್ಬರೂ ಐದೈದು ರೂಪಾಯಿ ನನ್ನ ಕೈಲಿಟ್ಟರು. ನನಗೂ ಕುದುರೆಗೂ ಬಹಳ ಸಂತೋಷವಾಯಿತು. ಬಹುಶಃ, ಬೆಂಗಳೂರಿನಲ್ಲಿ ಬೇರೆ ಒಬ್ಬ ಗಾಡಿಯುವನಿಗೂ ಇಂಥ ಅನುಭವ ಆಗಿರಲಾರದು

—0—

"ನೆನ್ನೆ ನಿಮ್ಮ ಮನೆ ಕಾಂಪೌಂಡ್ ಹತ್ರ ಹೋಗ್ತಾ ಇದ್ದಹಾಗೇ ನಾಯಿ ಬೊಗಳಿದ ಶಬ್ದ ಕೇಳಿಸ್ತು. ಹೆದರಿ ಹಿಂದಕ್ಕೆ ಬಂದೆ. ನಾಯಿ ಯಾವಾಗ್ನಿಂದ ಸಾಕಿದ್ದೀರಿ?"


ಛೇ! ನಾಯಿ ಎಲ್ಬಂತು? ಮನೇ ಒಳಗೆ ಆಕೆ ಮೊಸರಿನವನ ಲೆಖ್ಖ ಸೆಟ್ಲ್ ಮಾಡ್ತಾ ಇದ್ದಿರಬೇಕು ನಿನ್ನೆ ಅಷ್ಟೆ

* * *

"ಹೊಟ್ಟೆಗೆ ಹಿಟ್ಟಿಲ್ದೇ ಇದ್ರೂ ಪೇಸ್ಟಿಗೆ ವ್ಯೆದಾ" ಎಂಬ ಗಾದೆಯನ್ನು ಸರ್ಕಾರದವರು 'useless food' ಪ್ರಚಾರದಲ್ಲಿ ಉಪಯೋಗಿಸುತ್ತಿರುವುದಕ್ಕೂ ಸಿನಿಮಾಗಳವರು ಸಿಟಿಯಲ್ಲಿ ಪೋಸ್ಟರುಗಳನ್ನು ಅಸಾಧ್ಯವಾಗಿ ಹೆಚ್ಚಿಸುತ್ತಿರುವುದಕ್ಕೂ ಸಂಬಂಧ ಕಲ್ಪಿಸದಿದ್ದರೆ ಉಭಯತ್ರರಿಗೂ ತೊಂದರೆಯಿಲ್ಲವಂತೆ.

* * *

ಪ್ರೈ. ಮೇಷ್ಟ್ರು: (ಪುಸ್ತಕದಲ್ಲಿಲ್ಲದ ಲೆಖ್ಖವನ್ನು ಹೇಳುತ್ತಾ) ನಿಮ್ಮ ಉಪಾಧ್ಯಾಯರಿಗೆ ೨೫೦ ರೂಪಾಯಿ ಸಂಬಳ ಬರುತ್ತೆ ....(ಸ್ವಲ್ಪ ಸುಧಾರಿಸಿಕೊಂಡು)... .... ವರ್ಷಕ್ಕೆ! ಹಾಗಾದರೆ ತಿಂಗಳಿಗೆಷ್ಟಾಯಿತು–ಕಂಡು ಹಿಡಿಯಿರಿ. ಬಾಯಲ್ಲಿ ಯಾರೂ ಹೇಳಬೇಡಿ.



"ಓ, ಇದೇನ ಬ್ರೇಕು!"

ಕರ್ತವ್ಯ ದೃಷ್ಟಿ

ಬಹಳ ಬಲವಂತಮಾಡಿದ್ದರಿಂದ ಒಪ್ಪಿದೆ-ಅಧ್ಯಕ್ಷನಾಗುವುದಕ್ಕೆ. ಸ್ಕೂಲಿನ ಹತ್ತಿರವೇ ನಮ್ಮ ಮನೆ. ಆ ಬಡ ಉಪಾಧ್ಯಾಯರುಗಳು ನನ್ನ ಮನೆ ಹತ್ತಿರ ಬಂದು ನನ್ನನ್ನು ಕಾಡಿದರು–ಅಧ್ಯಕ್ಷರಾಗಿರಿ ಅಂತ. ಪೋಷಕ-ಬೋಧಕ ಸಂಘವಂತೆ. ಹುಟ್ಟಿ ಒಂದು ವರ್ಷವಾಗಿತ್ತಂತೆ. ಈಗ ಅದರ ವರ್ಷಾಬ್ದೀಕವಂತೆ. ಹಿಂದೆ ಯಾವಾಗಲೋ ಒಂದು ಸಲ ಅದೇ ಸ್ಕೂಲಿಗೆ ಪೋಷಕ-ಬೋಧಕ ಸಂಘದ ಸಂಬಂಧಕ್ಕೇ ಹೋದಂತೆ ನೆನಪು. ಆ ಸಲ, ಅವರು ನನ್ನನ್ನು, ಸಂಘ ಆರಂಭವಾಗುತ್ತೆ ಬನ್ನಿ, ನೀವೂ ಮಾತಾಡಿ, ಅಂತ ಎಳೆದುಕೊಂಡು ಹೋಗಿದ್ದರು. ನಾನೂ ಹೋಗಿ, ಇಂಥ ಸಂಘ ಈ ಸ್ಕೂಲಿನಲ್ಲಿ, ಈ ಊರಿನಲ್ಲಿ ಈ ದಿನ ಹೊಸದಾಗಿ ಆರಂಭವಾದದ್ದು ಸಂತೋಷ ಅಂತ ಹೇಳಿದ್ದೆ. ಆ ದಿನದ ಅಧ್ಯಕ್ಷರು–ಸ್ಕೂಲಿನ ಮೇಲಿನ ಅಧಿಕಾರಿಗಳೊಬ್ಬರು–" ಇದೇನು, ನನ್ನನ್ನು ಈ ಸಂಘದ ವಾರ್ಷಿಕೋತ್ಸವ ಅಂತ ಕರೆದಿದ್ದಾರೆ. ಈ ಮಹಾಶಯರು ಈ ದಿನ ಈ ಸಂಘ ಆರಂಭವಾಯ್ತು ಅಂದಿದ್ದಾರೆ" ಅಂತ ಏನೇನೋ ಹೇಳಿದ್ದರು. ಅವೆಲ್ಲಾ ನೆನಪಿಗೆ ಬಂತು. ಅಂತು ಸ್ಕೂಲು ಆರಂಭವಾದಾಗ ಈ ಸಂಘ ಗುಪ್ತವಾಗಿ ಹುಟ್ಟಿಕೊಂಡು ಒಂದು ವರ್ಷ ಅಜ್ಞಾತವಾಸದಲ್ಲಿದ್ದುಕೊಂಡು ಶಾಲೆಗಳಿಗೆ ರಜಾ ಆರಂಭವಾದಾಗ ಅದರ ವರ್ಷಾಬ್ಧೀಕ ನಡೆದು, ನಮ್ಮಂತಹವರು ಯಾರೋ ಒಬ್ಬರು ಇದರ ಜನನಕ್ಕೊ, ತಿಥಿಗೋ ಪೌರೋಹಿತ್ಯ ಮಾಡುವುದು ಈ ಸಂಘದ–ಅಂತೇ ಇವರ ಬಹಳ ಸಂಘಗಳ–ವಾಡಿಕೆ ಅಂತ ಕಾಣುತ್ತೆ.

ಭಾನುವಾರ ನಾಲ್ಕು ಗಂಟೆಗೆ ಮುಹೂರ್ತ ಇಟ್ಟಿದ್ದರು. ಹೋದೆ. ಸ್ಕೂಲಿನ ಉಪಾಧ್ಯಾಯರು ಐದಾರು ಜನ, ಜವಾನರು ಒಬ್ಬಿಬ್ಬರು, ಒಬ್ಬ ಗುಮಾಸ್ತ, ವಾಸನೆ ಹಿಡಿದು ಬಂದಿದ್ದ ಎಂಟು ಹತ್ತು ಚುರುಕು ಹುಡುಗರು ಆ ಸಭಾಭವನದಲ್ಲಿ " ಕಿಕ್ಕಿರಿದು " ಕುಕ್ಕುರಿಸಿದ್ದರು. ನಾನು ಅಲ್ಲಿಗೆ ಹೋದ ಮೇಲೆ, ಮತ್ತಾರೂ ಪೋಷಕರು ಇರಲಿಲ್ಲವೆಂದು ಸುತ್ತುಮುತ್ತಲಿನ ಮನೆಯ ಒಬ್ಬಿಬ್ಬರನ್ನು ಬೇಟೆಯಾಡಿ ಹಿಡಿತಂದರು ನಂತರ ಆ ದಿನದ ಕಾರ್ಯಕ್ರಮದ ಬಹುಮುಖ್ಯವಾದ ಕೆಲಸ ಆರಂಭವಾಯ್ತು–ಉಪ್ಪಿಟ್ಟು ಕಾಫಿ ಸರಬರಾಜು. ಅದು ಮುಗಿದ ಮೇಲೆ ಆ ಚುರುಕ ಹುಡುಗರು ಅಲ್ಲಿಂದ ಹೊರಟರು. ಇನ್ನುಳಿದ ಅಲ್ಪ ಸ್ವಲ್ಪ ಕೆಲಸವನ್ನು ಮುಗಿಸಿಯೇ ಬಿಡೋಣವೆಂದು ನಾನು ಎಲೆಡಕೆ ಜಗಿಯುತ್ತಾ ವೇದಿಕೆಯಲ್ಲಿ ಆರೂಢನಾದೆ. ಮಾಮೂಲಿನಂತೆ ಪ್ರಾರ್ಥನೆಯಾಯ್ತು. ನಂತರ ಮುಖ್ಯೋಪಾಧ್ಯಾಯರು ಆರಂಭ ಭಾಷಣ ಮಾಡಿದರು; " ಘನ ಸರ್ಕಾರದವರು ಈ ದಿವಸ ಈ ಸ್ಕೂಲಿನ ದಿನಾಚರಣೆ ಮಾಡಬೇಕೆಂದು ಹುಕುಂ ದಯೆಪಾಲಿಸಿರುವುದರಿಂದ ನಾವು ಮಾಡಿದ ಈ ದಿನಾಚರಣೆಗೆ ನೀವುಗಳು ಬಂದದ್ದು ಸಂತೋಷ........'' ಎಂದು ಹೇಳಿ, ಯಾವ ಯಾವ

ಶಾಲೆಯಲ್ಲಿ ಎಷ್ಟು ಎಷ್ಟು ಹುಡುಗರು ಇದ್ದಾರೆ ಎಂಬುದನ್ನೂ ಅವರು ಓದುತ್ತಿರುವ ಪಠ್ಯ ಪುಸ್ತಕಗಳ ಹೆಸರು, ಖರೀದಿ, ಪುಸ್ತಕಗಳು ದೊರೆಯುವ ಸ್ಥಳಗಳ ವಿವರಗಳನ್ನೂ ತಿಳಿಸಿದರು. ನಂತರ ಮುಖದ ಬೆವರನ್ನು ಒರಸಿಕೊಂಡು ತಮ್ಮ ಸ್ಥಳದಲ್ಲಿ ಸುಖಾಸೀನರಾದರು. ನಂತರ ಇನ್ನೊಬ್ಬ ಉಪಾಧ್ಯಾಯರು ಎದ್ದು ಬಂದು "ಘನ ಸರ್ಕಾರದವರು ಪೋಷಕ-ಬೋಧಕ ಸಂಘದ ವಾರ್ಷಿಕೋತ್ಸವವನ್ನೂ ಸಹ ಈ ದಿನ ಮಾಡಬೇಕೆಂದು ತಿಳಿಸಿರುವುದರಿಂದ ಈ ದಿನ ನಾವು ಅದನ್ನು ಯಶಸ್ವಿಯಾಗಿ ನಡೆಸಿದ್ದೇವೆ. ಇಲ್ಲಿಗೆ ಬಂದ ಪೋಷಕರಿಗೆ ನಮ್ಮ ವಂದನೆಗಳು" ಎಂದು ಹೇಳಿ ಪೋಷಕರನ್ನೆಲ್ಲಾ ವಂದಿಸಿದರು. ನಂತರ ಸಂಗೀತ ಬರುತ್ತೆಂದು ತಿಳಿದುಕೊಂಡುಬಿಟ್ಟಿದ್ದ ಉಪಾಧ್ಯಾಯರೊಬ್ಬರು ಭಾರತಪಠಣ ಮಾಡಿಯೇಬಿಟ್ಟು, "ಘನ ಸರ್ಕಾರದವರ ಹುಕುಂ ಮೇಲೆ ನಡೆಸಿದ ಈ ದಿನಾಚರಣೆಯಲ್ಲಿ ನನ್ನ ಸೇವೆಗೂ ಸ್ಥಳ ಕೊಟ್ಟಿದ್ದಕ್ಕೆ ನಿಮಗೆ ವಂದನೆಗಳು" ಎಂದು ನಿಜವಾಗಿಯೂ ವಂದನೆಗಳನ್ನರ್ಪಿಸಿದರು–ಕಾರ್ಯಕ್ರಮವನ್ನೆಲ್ಲಾ ಮುಗಿಸಿಬಿಟ್ಟರು.

ನಂತರ ನಾನು ಭಾಷಣ ಮಾಡಿದೆ; ಇಂಥಾ ಸಭೆಯೊಂದು ಜರುಗಿತು ಅಂತ ರಿಪೋರ್ಟ್ ಕಳುಹಿಸುವ ಪೂರ್ತಾ ಸಭೆ ಕರೆಸುವುದಾದರೆ, ಸಭೆ ನಡೆದಂತೆ ರಿಪೋರ್ಟ್ ಬರೆದು ಅಧ್ಯಕ್ಷರ ಮನೆಗೇ ಹೋಗಿ ರುಜು ಹಾಕಿಸಿಬಿಡುವುದು ಉತ್ತಮ; 'ಈ ತರಹ ಸಂಘಮಾಡಿ, ವಾರ್ಷಿಕೋತ್ಸವ ಮಾಡಿ' ಅಂತ ನಿಮ್ಮ ಮೇಲಿನವರು ಸೂಚಿಸುವುದು ಸಹಜ; ಆದರೆ ನೀವು ಕುರುಡುಪಾಠ ಮಾಡಬಾರದು; ಅವರು ಹೇಳಿದರು, ನಾವು ಮಾಡಿದೆವು, ಅಂತ ಅಷ್ಟಕ್ಕೇ ತೃಪ್ತರಾಗುವುದು ಸರಿಯಾದ ಕರ್ತವ್ಯ ದೃಷ್ಟಿಯಲ್ಲ; ಕಾರ್ಯದ ಉದ್ದೇಶ ಸಾಫಲ್ಯವಾಗುವಂತೆ ಮಾಡುವುದನ್ನು ಅರಿಯಬೇಕು; ರಿಪೋರ್ಟ್ ಪೂರ್ತ್ಯಾ ಈ ತರಹ ಸಂಘಗಳನ್ನು ವರ್ಷೇ ವರ್ಷೇ ಹುಟ್ಟಿಸಿ ಸಾಯಿಸುವುದು ಸರಿಯಲ್ಲ; ವಗೈರೆ ವಗೈರೆ ಹೇಳಿ, ಅರಚಿ, ಕಿರಚಿ, ಸುಸ್ತಾದೆ.

ಕಡೆಯದಾಗಿ ಇನ್ನೊಬ್ಬ ಉಪಾಧ್ಯಾಯರು ವಂದನೆಗಳನ್ನು ಅರ್ಪಿಸಿದರು:— "ಘನ ಸರ್ಕಾರದವರು ಈ ವಾರ್ಷಿಕ ಮಾಡಬೇಕಾಗಿ ಹೇಳಿದ್ದರಿಂದ ಮಾಡಿದ ಈ ಸಭೆಗೆ ಅಧ್ಯಕ್ಷರಾಗಲು ಒಪ್ಪಿದ...." ಇತ್ಯಾದಿ.

ಸಭೆ ಮುಗಿದು ನಾವುಗಳು ಹಿಂದಿರುಗುತ್ತಿದ್ದಾಗ ಒಬ್ಬ ಉಪಾಧ್ಯಾಯ ಹೇಳಿದ "ನೀವು ಹೇಳಿದ್ದು ಸರಿ ಸಾರ್; ಬಹಳ ಸರಿ; ಇನ್ನು ಮೇಲೆ ನಾವು ಹಾಗೇ ಮಾಡ್ತೇವೆ, ಖಂಡಿತ ಮಾಡ್ತೇವೆ; ನಾವು ಇದುವರೆವಿಗೂ ಮಾಡುತ್ತಾ ಇದ್ದದ್ದು ತಪ್ಪು ಇನ್ನು ಮೇಲೆ, ಸುಮ್ಮನೆ ಇಲ್ಲಿಗೆ ಎಲ್ಲರನ್ನೂ ಬರಮಾಡಿಕೊಳ್ಳುವುದರ ಬದಲು ಸಭೆ ಆಯ್ತು ಅಂತ ಬರೆದು ಅಧ್ಯಕ್ಷರನ್ನು ಅರಿಸಿ ಅವರ ಮನೆಗೆ ಹೋಗಿ ರುಜುಮಾಡಿಸಿ ಕಳುಹಿಸಿಬಿಡುತ್ತೇವೆ, ರಿಪೋರ್ಟನ್ನ!"

—ರಾ. ಮು.

ನವಯುಗ ಮಾಣಿ

—o—

[ಪುಟ್ಟಪ್ಪನವರ 'ಪರ್ಮಿಷನ್'ಗಾಗಿ ಪರಪಾಡಿ ಪ್ರಯಾಸಪಡದೆ]

— ೧ —

"'ಸರ್ವರಿ'ಗೆ ನರಿಕೂಳು! 'ಸರ್ವರಿ'ಗೆ ಬರಿಗೋಳು!"
ಎಂದು ನವಯುಗ ಮಾಣಿ ಘೋಷಿಸಿಹ, ಕೇಳಿ.
ದಿನದಿನದ ಮಾಣಿತ್ವ ಭಾರದಿಂ ಕಣ್ ಬಾಗಿ
ಕಾಲಿಡುವ ಗೆಡವರಿರ, ಏಳಿರೈ, ಏಳಿ!
ಕಸ್ಟಮರ ಅಡಿಹುಡಿಯು ಹೋಟಲಲಿ ಹೊರಳಾಡಿ
ಮಲಗಿ ಕೊಬ್ಬಿದರೆಲ್ಲ ದುಗುಡವನೆ ತಾಳಿ!
ಕಿವಿಗೆಟ್ಟ ಸೋದರರೆ, ಬಂದಿಹಳು ಕಾಣಿರೈ
ಮಾಲಿಕರ ಸೀಳಿ, ಅದೊ ರೇಷನಿನ ಕಾಳಿ.

— ೨ —

ಇಂದ್ರ ಭವನಗಳಿಂಗೆ ಬಂದಿಹುದು ಕೊನೆಗಾಲ
ಕಡಮೆಯಾಗುವುದಿಂದು ನಿಮ್ಮ ಕೂಲಿ.
'ಸ್ಪೆಷಲ್ ಫೀ' ತಿಂಡಿಗಳ ಮೋದಕ್ಕೆ ಬದಲಾಗಿ
ಗೋಚರಿಪುದಲ ಹೆಸರುಬೇಳೆಯು ಖಾಲಿ!
ದ್ರವ್ಯಾನುಕೂಲತೆಯು ಜಾತಿಯಾ ನೀತಿಯಾ•
ಪಕ್ಷಪಾತವನೆಲ್ಲ ಗಣಿಸದೆಯೆ ಗುದ್ದಿ,
ಮತ್ತೊಂದು ವ್ಯಾಪಾರ ಕತ್ತಲಲಿ ನಡಸುವರು
ರೇಷನನ್ಯಾಯವನು ಮಾಲಿಕರೆ ತಿದ್ದಿ.

— ೩ —

ಕೈಲಾಗದವರೆಂಬ ನಾವು ಕೀಳೆಂದೆಂಬ
ಹಣಬರಹವೆಂದೆಂಬ ಮೌಢ್ಯತೆಯು ನೀಗಿ.
" ಕತ್ತಲಿನ ವ್ಯಾಪಾರಕೆಲ್ಲ 'ಸರ್ವರು' ಸೇರಿ

ಕೈಯುಕೊಡದೊಮ್ಮನಸು ಮಾಡಿ ನೆರವಾಗಿ !"
ಎಂಬುವಾ ಮಾಲಿಕಗೆ ಮರುಳಾಗಿ ಮೂರ್ಖರೊಲು
ವರ್ತಿಸುತ ಮಾಲಿಕನ ಭಾರವನು ಹೊತ್ತು
ಸತ್ತಂತೆ ಬದುಕದಿರಿ. ರೇಷನಿನ ಹೆಸರಿಂದೆ
ಆಪರಿಂಡುವ ದೋಸೆಯಾ ಬೆಲೆ ನಮಗೆ ಮೃತ್ಯು.

— ೪ —

ಈಗ ಬೇಗನೆ ಎದ್ದು ಮುಂದೆ ಬಹ ಜನಗಳಿಗೆ
ಹೊಟ್ಟೆಗನ್ನವ, ಕೈಗೆ ತಟ್ಟೆಯನು ನೀಡಿ.
ನಿಮಗೆ ನೋವಾದರೂ, ನಿಮಗೆ ಸುಸ್ತಾದರೂ
ಕಷ್ಟವುರ ಕಾಯಿಸದೆ ನೆಮ್ಮದಿಯ ಮಾಡಿ.
ಇಂದು ನೀವೇಳದಿರೆ, ಬೇಗ ಸರ್ವ್ ಮಾಡದಿರೆ
ನಮ್ಮಗಳ ಪಾಡಂತು ಯಾರಿಗೂ ಬೇಡಿ.
" ಇಂಥ ಕಾಫಿಯು ಬಿಂದು ನಮ್ಮ ಸೌಖ್ಯವ ಕೊಂದು
ಕಾಡಿವುದೊ ಇಲ್ಲವೋ ಉತ್ತರವ ನೀಡಿ. —ಕೈ.

"ಹೊಟ್ಟೆ ತಳ್ಳಗೆ ಬಟ್ಟೆ ಬೆಳ್ಳಗೆ" ಎಂಬ ಗಾದೆಗೆ ದವಸ ಧಾನ್ಯವಿಲ್ಲದೆ ಸಾಬೂನು ಮಾರುವುದು ನಮ್ಮೂರು ಸೊಸೈಟಿ ಅಕ್ಕ ! ಸರ್ವಜ್ಞ

ನೀತಂದ ಹಾಲನ್ನೇ ಕಾಫೀಗೆ ಬೆರಸಿ ಇದೇನೆ ಇಷ್ಟು ಕಪ್ಪು ? ಎಂದರೆ-ಹಾಲಿನವಳ ಗಲ್ಲದೆ, ನಿನ್ನವಳಿಗೇನು ಗೊತ್ತು ? ಸರ್ವಜ್ಞ.

ಸಂದಿಯಲಿ ಗೊಂದಿಯಲಿ, ಕಾಸಿರಲಿ, ಕವಡೆ ಇರಲಿ, ನಿಂತಲ್ಲೆ ಕೂತು ರಾಜ-ರಾಣಿ ಆಟವಾಡುವುದು ನಮ್ಮೂರು ಜನವಕ್ಕ ! ಸರ್ವಜ್ಞ.

ಓದಲು ಪುಸ್ತಕವಿಲ್ಲದೆ, ಕೂರಲು ಜಾಗವಿಲ್ಲದೆ, ಹತ್ತಾರು ತಿಂಗಳಿಂದ ತೆರೆದಿತ್ತು, ನಮ್ಮೂರು ರೀಡಿಂಗ್ ರೂಮು ! ಸರ್ವಜ್ಞ.

ಶ್ರೀಹರಿಯ ಸೇವೆಯಲಿ ಜಾತಿ ಭೇದವ ಎಣಿಸಿ ತಾನು ಹೆಚ್ಚು ನೀನು ಮೆಚ್ಚು- ಎಂದು ಕೂಗಿದರೆ ಅದಾವ ಶ್ರೀಹರಿಯು ಮೆಚ್ಚುವನು ! ಸರ್ವಜ್ಞ.

"ಕಲಿಗನ್ನಡದ ಕಣಿಗನ್ನಡಿ"

ಭಯಾನಖ: ವೀಣೆ ಬಾರಿಸುವವನ ಉಗುರುಗಳು.

ಬಾಂದ್ರೆ: ಸತಿಯು ಪತಿಯನ್ನು ಸಲಿಗೆಯಿಂದ ('ಬಾ ಆಂದ್ರೆ' ಎಂದು) ಸಂಬೋಧಿಸುವುದು; ಅನೇಕಬಾರಿ ಅಕಾರಲೋಪವಾಗುವುದು.

ಬೇಕರಿ: ಇದೊಂದೇ ಕಡೆ ಬ್ರಾಹ್ಮಣರಿಗೆ ಉತ್ತೇಜನ.

ಬೇಕೂಪನ್: ಕೂಪನ್ ಇಲ್ಲದೆ ಡಿಪೋಕ್ಕೆ ಬಂದವ.

ಅವಲಕ್ಕಿ: ಹರಿಕಥೆಗಳಲ್ಲಿ ಶ್ರಾವಕವೃಂದ ಸಾಮಾನ್ಯವಾಗಿ ಮೇಯುವ 'ಫಳಾರ' ವಿಶೇಷ.

ಪವಲಕ್ಕಿ: ಒಂದು ಪಾವು ಅವಲಕ್ಕಿ.

ಉಪಾಧ್ಯಾಯ: ಒಂದು ಹೊತ್ತು ಉಪವಾಸವಿದ್ದು ತನ್ನ ಅಧ್ಯಾಯವನ್ನು ಮುಗಿಸಿಕೊಳ್ಳುವವ.

ಗಾಂಧೀವ: ರ ಬಿಲ್ಲಿಗೆ ಬಾಣವೇ ಇಲ್ಲವಂತೆ.

ಸಂಬಲ: 'ಸಂಬಳವೇ ಗಟ್ಟಿ' ಎನ್ನುವ ಕಾರಕೂನ.

ಕಾರಖೂನ: ಕಾರಿನಲ್ಲಿ ಖೂನಿ ಮಾಡುವವ.

O. K: ಒಳ್ಳೇದು ಕಣಯ್ಯ, ಓತಿಕ್ಯಾತ, ಒಡೆಕೊಡಿಸು.

ನಾರಿಕೇಳಾ: ಹೆಣ್ಣೇ, ಕೇಳುವಂಥಾವಳಾಗು.

ತಂದೆ ತಾಯೀ: ತಗೊಂಬರ್‍ತೀನಮ್ಮಾ.

ಪರಭಾತ್: 'ಪ್ರಭಾತ್' ಎಂಬುದರ ಉರ್ದು ಉಚ್ಚಾರಣೆ-ಇನ್ನೊಬ್ಬ ಕೊಡಿಸಿದ ಭಾತು.

ಸಹಮುರ್ವಿಣಿ: ಸಂಸಾರದ ಗುಟ್ಟನ್ನು ಹೊರಬಿಡದೆ ಗಂಡನೊಡನೆ ತೇಪೆ ತಿದ್ದುವವಳು.

ಸೂಜಿಗ: ದರ್ಜಿ.

ಗೆದ್ದುಗೆ: ಅಮೇರಿಕನರಿಗೆ ಈಗ ಜಪಾನು. ಅಕ್ಷರಶಃ ಪದವನ್ನು ತಿರುಗಿಸಿದರೂ ಅದೇ.

ಆಕಾಶವಾಣಿ: ಹೋಟಲ್ ಮಹಡಿ ಮೇಲೆ ಸಪ್ಲೈಮಾಡುವವ.

ಪರಂಗಿ: ಎರವಲು ತಂದ ಸೂಟು.

ಚಿಲ್‌ಚಿಲ್‌ರೆ ನವಜವಾನ್: ವಾರ್‌ಕ್ವಾಲಿಟಿ ತರುಣರು.

ಲಲ್ಲಿತ : ಮಾತಿಗೆ ಮರುಳಾಗಿ ವ್ಯೈಮರೆತವ.

ತಲೆಕಾಡು : ಹುಲುಸಾಗಿ ಬೆಳೆದ ಕ್ರಾಪು.

ರಕ್ತ'ಗಣಿ' : Blood Bank.

ಪಾಯಾಸ : ಪಾಯಸತಿಂದು ಮಾಡಿಕೊಂಡ ಆಯಾಸ.

ಗೋಕರ್ಣ : 'ಕರ್ಣನೇ ರಣರಂಗಕ್ಕೆ ಹೋಗು' ಎಂಬ ಕೌರವೋಕ್ತಿ.

ಚಕ್ರಪಾಕ : ಚಕ್ಕುಲಿ, ಕೋಡಬಳೆ ಇತ್ಯಾದಿ ರೌಂಡಾದ ಭಕ್ಷ್ಯಗಳು.

ಚೆಕ್ಕಲಿ : ಡಿಪ್ಪೋ ಇಲಿಗಳ ಮೇಲೆ 'ಚೆಕ್' ಮಾಡುವ ಹೆಗ್ಗಣ.

ಗಜಗಜಾಂತರ : ನಾಲ್ಕು ಗಜವನ್ನು ಆರಾಗಿ ಅಳೆದು ತೋರಿಸುವುದು.

—ಟೀಯಸ್ಸಾರ್ರಾವ್.

"ನನ್ನ ಸ್ನೇಹಿತರೆಲ್ಲ ನನ್ನನ್ನು ನವತರುಣಿಯೆಂದೇ ಹೊಗಳುತ್ತಿದಾರೆ" (ಸ್ಕ್ರೀಜಾಹಿರಾತಿನ ಮೋಹಿನಿ)— (ಇಲ್ಲದಿದ್ದರೆ ಸ್ನೇಹ ಉಳಿಯುವುದು ಹೇಗೆ ?)

* * *

"ಕ್ರಿಪ್ಸರ ಪತ್ನಿ ಇಂಡಿಯಾದೇಶಕ್ಕೆ ಬಂದಿದಾರೆ ; ಕೂಡಲೇ ಅವರು ಪತಿ ಸಮೇತರಾಗಿ ಇಂಗ್ಲಂಡಿಗೆ ಹಿಂದಿರುಗುವರು" (ಸುದ್ದಿ)—— ಮಿಕ್ಕ ಮಂತ್ರಿಗಳು ತಮ್ಮ ಪತ್ನಿಯರು ಬರುವ ಮೊದಲೇ ಹೊರಡಲು ಸಿದ್ಧವಾಗುತ್ತಿರುವರಂತೆ.

* * *

ಲಂಚನಿವಾರಣಾ ಕಾರ್ಯಕ್ರಮ ಪ್ರಾರಂಭವಾದ ಕೂಡಲೇ ಸರ್ಕಾರಿ ನೌಕರರು ಲಂಚ ಇಸುಕೊಳ್ಳುವುದನ್ನು ನಿಲ್ಲಿಸಿ ಬಿಡುತ್ತಾರಂತೆ (ಸುದ್ದಿ)—— ಹಾಗಾದರೆ, ಅಲ್ಲಿಂದಾಚೆಗೆ ಯಾರು ಇಸುಕೊಳ್ಳುತ್ತಾರೆ ?

* * *

"ಸರ್ಕಾರದವರು ನಾಮಕರಣ ಪದ್ಧತಿಯನ್ನು ತ್ಯಜಿಸಬೇಕು" (ಠರಾವು).... ನಿಜ! ಸಾರ್ವಜನಿಕರೇ ಅವರಿಗೆ ಸಮಂಜಸವಾಗಿ ನಾಮಕರಣ ಮಾಡುತ್ತಾರೆ.

ಏಳಿಗೆಯ ಪದ

(ಶ್ರೀಯವರ 'ಕಾಳಗದ ಪದ'ವನ್ನು ಅನುಸರಿಸಿ)

ಏಳಿ, ಮರಿ, ಏಳ್ಮರಿಗಳೆ!
    ಏಳಿ, ಅಳಿಯ ಏಳಿ.
ನಿಂನಿಮ್ಮ ಬುಕ್ಕುಗಳ
    ಕೂಡಿಕೊಳ ಏಳಿ.
ಏಳಿರಣ್ಣ, ಏಳಿರಣ್ಣ
    ಅದೊ ಗಂಟೆ ಕೇಳಿ.
ಕನ್ನೆಯರ, ನಂಟರಿರ,
    ಬದುಕಿ, ಏಳಿ, ಏಳಿ. ||೧||

ಬಿಡಿ ಇರಲಿ ಬೂಟ್ಸುಗಳು,
    ಹೊಸ 'ಕತ್ತ ಕಟ್ಟು'.
ಬಿಡಿ ಇರಲಿ ರವಿಕೆ ಕಣ,
    ಹಸೆಬಾರ್ಡರ್ ಸೀರೆ.
ಬಿಡಿ ಮುಲ್ಲೆ, ಬಿಡಿ ವಂಕಿ
    ಮುಖ ಚೂರ್ಣಗಳನು.
ಹಿಡಿದುಕೊಳಿ ಬುಕ್ಕುಗಳ,
    ಹಲಗೆ ಬಳಪವನು. ||೨||

ಹಾಸಿಗೆಯ ಬೆಟ್ಟಗಳ
    ನಡುವಿಂದ ಬನ್ನಿ.
ಪುಡಿ, ಬುರುಸು, ತಂಬಿಗೆ
    ನೀರುಗಳ ತನ್ನಿ.
ಎಚ್ಚರಿರ, ಮಕ್ಕಳಿರ,
    ಮೈಮುರಿಯ ಬೇಡಿರೊ!
ಬಿಚ್ಚುಗತ್ತಿಯ, ಬ್ರಷ್ಷ
    ಕೈ ಝಾಡಿಸಿಡಿರೊ! ||೩||

ರೋಡ ಸೀಳುತ ಕಾರು
    ಬರುವಂತೆ ಬನ್ನಿ.
ಕಾಡ ಕೊಚ್ಚುತ ಟಾಂಕು
    ಬರುವಂತೆ ಬನ್ನಿ.
ಓದಿ ಬನ್ನಿ, ಓದಿ ಬನ್ನಿ
    ಓದಿ ಓದಿ ಬನ್ನಿ,
ರಾಧ, ಸರು ; ರಾಜ, ಮಣಿ ;
    ವೇದವಿಮು ಬನ್ನಿ ||೪||

ಬನ್ನಿರಣ್ಣ, ಬನ್ನಿರಣ್ಣ
    ಬಾಯ್ಬಿಟ್ಟು ಕಿರುಚಿ!
ತನ್ನಿರೋ ಕಾಗದವ
    ಪೆನ್ಸಿಲ್ಲು, ಪೆನ್ನು!—
ಹಿರಿ ಪೆನ್ನ! ಸುರಿ ಇಂಕ!
    ಹರಿ ಕಾಗ್ದ, ಓದು!
ಪರೀಕ್ಷೆಲಿ ಬರಿ. ಮಗನೆ!
    ಬರಿ, ಪಾಸು ಮಾಡು ||೫||

—ಅಕ್ರೂರ.

ವಿಮಾ ಅರ್ಜಿಯ ಸಬೂಬು

ಈ ಮೋಟಾರು ವಿಮಾ ಕಾನೂನು ಬಂದ ಮೇಲೆ ವಿಚಿತ್ರ ಪತ್ರವ್ಯವಹಾರಗಳು ಆಗತೊಡಗಿವೆ. ನಮ್ಮ ವಿಮಾ ಕಂಪೆನಿಗೆ ಬಂದ ಕಾಗದಗಳ ಮುಖ್ಯ ವಿಷಯಗಳು.

"ಅವನು"

ಅವನು ನೆಟ್ಟಗೆ ಹೋಗುತ್ತಿದ್ದವನು ಒಮ್ಮೆಲೇ ಬಲಕ್ಕೆ ತಿರುಗಿದ. ನಾನು ಅವನಿಗೆ ಡಿಕ್ಕಿ ಹೊಡೆಯಬೇಕಾಯ್ತು.

ನನ್ನ ಮಟ್ಟಿಗೆ ಹೇಳುವುದಾದರೆ ಎರಡು ವಾಹಕರದೂ ತಪ್ಪಿಲ್ಲ. ಆದರೆ ಯಾರದಾದರೂ ತಪ್ಪು ಎಂದು ಹೇಳಬೇಕಾದರೆ, ಅವನದೇ.

ಆ ಜಟಕಾ ಹಿಂದುಹಿಂದಕ್ಕೆ ನುಗ್ಗಿ, ನನ್ನ ಮುಖಕ್ಕೆ ಕಿಟಕಿಯೊಳಗಿನಿಂದ ಗುಮ್ಮಿತು

ನಿಂತಿದ್ದ ಎತ್ತಿನ ಗಾಡಿಯೊಂದು ಎದುರುಗಡೆಯಿಂದ ಬಂದು, ಜಾಗರೂಕನಾಗಿದ್ದರೂ ನನ್ನ ಮೋಟಾರಿಗೇ ಡಿಕ್ಕಿ ಹೊಡೆಯಿತು.

ಲಾಂದ್ರದ ಕಂಭಕ್ಕೆ ಡಿಕ್ಕಿ ಹೊಡೆವುದನ್ನು ತಪ್ಪಿಸಲು ಯತ್ನಿಸಿ ಜಟ್ಕಾಕ್ಕೆ ಡಿಕ್ಕಿಸಿದೆ.

ಎದುರು ವಾಹನವು ಸ್ವಲ್ಪದರಲ್ಲಿ ತಪ್ಪಿಸಿಕೊಂಡಿದುದರಿಂದ ಈ ಅಪಘಾತವು ಆಯ್ತು

"ರಸ್ತೆಯ ತಪ್ಪುಗಳು"

ನನ್ನ ಗಾಡಿಗೆ ಏನೂ ಪೆಟ್ಟು ಬೀಳಲಿಲ್ಲ ಬೇಕಾದರೆ ಆ ಗೇಟ್ ಕಂಬವನ್ನು ನೋಡಿ.

ರಸ್ತೆಯು ಹಠಾತ್ತನೆ ತಿರುಗಿದುದರಿಂದ ಅಪಘಾತವಾಯ್ತು.

ರಸ್ತೆಯು ಹಠಾತ್ತಾಗಿ ಮುಗಿದುಹೋಯ್ತು. ಆ ಕಾರಣ, ಅಪಘಾತ.

"ಬೇಹುಷಾರಿ ದಾರಿಗ"

ಚಲ್ ಚಲ್‌ರೆ ಹಾಡುತ್ತಿದ್ದವನೊಬ್ಬ ನನ್ನ ಮೋಟಾರನ್ನು ಗುಮ್ಮಿದ್ದಲ್ಲದೆ ಅದರ ಕೆಳಗೆ ಹೋಗಿ ಸಿಕ್ಕುಹಾಕಿಕೊಂಡ.

ಮೂರು ಜನ ಹೆಂಗಸರು ಸಮಾಜದ ಸರ್ಕಲ್ಲಿನಲ್ಲಿ ಮಾತನಾಡುತ್ತಿದ್ದರು. ಇಬ್ಬರು ಒಂದು ಕಡೆಗೂ ಇನ್ನೊಬ್ಬಾಕೆ ಇನ್ನೊಂದು ಕಡೆಗೂ ಸರಿದರು ಅಂದ ಮೇಲೆ ಅಪಘಾತವನ್ನು ತಪ್ಪಿಸಲು ದೇವರಿಗೂ ಸಾಧ್ಯವಿರಲಿಲ್ಲ.

ನಾನೊಬ್ಬ ದಾರಿಗನಿಗೆ ಡಿಕ್ಕಿ ಹೊಡೆದೆ. ಅವನೇ ಒಪ್ಪಿಕೊಂಡ "ತಪ್ಪು ಅವನದು" ಎಂದು. ಹಿಂದೆ ಸಾಲ್ಕಾರುಬಾರಿ ಹೀಗೆ ತಪ್ಪು ಮಾಡಿದ್ದನಂತೆ-ಹಳೇ ಗಿರಾಕಿ.

"ನ್ಯಾಯಾಂಗ ಚುಟಿಕೆಗಳು"

ನೋಡುವವರು ಬೇಕಾದಷ್ಟು ಜನ ಇದ್ದರು ಆದರೆ ಸಾಕ್ಷಿಗಳು ಯಾರೂ ಇರಲಿಲ್ಲ.

ಮೆಜಸ್ಟಿಕ್ ದಾಟಿದ ಮೇಲೆ ನನಗೇನೂ ಗೊತ್ತಾಗಲಿಲ್ಲ. ಕಣ್ತೆರೆದಾಗ ಕಾನ್ಸ್‌ಟೆಬಲ್ ರಂಗಪ್ಪ ಎದುರಿಗಿದ್ದ.

ಅಪಘಾತವಾದ ಮೇಲೆ ಶ್ರಮಜೀವಿಯೊಬ್ಬ ಬಂದು ನನ್ನ ಪರ ಸಾಕ್ಷಿಯಾಗುತ್ತೇನೆಂದು ಹೇಳಿದ.

ಹೋಟಲ ಬಾಗಿಲಲ್ಲಿ ಆಸ್ಟಿನ್ ಏಳನ್ನು ಬಿಟ್ಟು ಒಳಕ್ಕೆ ಹೋದೆ. ಹೊರಕ್ಕೆ ಬಂದಾಗ ಆಸ್ಟಿನ್ ಎಂಟು ಹೊರಗಿತ್ತು. ನನಗೆ ಆಶ್ಚರ್ಯವಾಯ್ತು.

"ಕಂಡೂ ಕಾಣದ್ದು"

ನಮ್ಮ ಮನೆಗೆ ಒಂದೇ ಗೇಟಿತ್ತು ಎಂದುಕೊಂಡಿದ್ದೆ. ಆದರೆ ಗಾಡಿ ತಿರುಗಿಸಿದಾಗ, ಇಲ್ಲದ ಗೇಟಿಗೆ ಗುಮ್ಮಿದೆ.

ಕಿಟಿಕಿ ತೆಗೆದಿದೆ ಎಂದಿದ್ದೆ–ಆದರೆ ಮುಚ್ಚಿತ್ತು–ನಾನು ಕೈ ಹೊರಗೆ ಹಾಕಿದಾಗ ಗೊತ್ತಾಯ್ತು.

"ಜಾತಿ ಅಪಘಾತ"

ಕಾಲು ಮುರಿದದ್ದು ಮರೆತುಬಿಟ್ಟ. ಜನಿವಾರ ಹರಿದುಹೋಯ್ತು ಅಂತ ಫಿರ್ಯಾದು ಮಾಡಿದ್ದಾನೆ.


ಅವನ ನಾಮ ನೋಡಿ ಗಾಭರಿಯಾಯ್ತು. ಗಾಡಿ ಹದ ತಪ್ಪಿತು.

ನಾನೇನೋ ಹಾರ್ನ್ ಮಾಡಿದೆ. ಅದು ಬ್ರಾಹ್ಮಣ ಹಾರ್ನ್. ಅದರ ಕೂಗು ಯಾರಿಗೂ ಕೇಳಿಸಲಿಲ್ಲ.

ಆ ಮೋಟಾರು ಡ್ರೈವರು ಮೊದಲುಯಾರ್, ಮೊದಲುಯಾರ್ ಎಂದು ಮುನ್ನುಗ್ಗಿದ. ಅವನೇ ಮೊದಲ ಪ್ರಜೆ ಎಂದು ದಾರಿಬಿಟ್ಟೆ. ಆದರೆ ಅವನಿಗೆ ಅವಸರ. ನನ್ನ ಸೊಂಟಕ್ಕೆ ಬಂದು ಝಾಡಿಸಿದ.

ಎದುರು ಗಾಡಿಯವನು ಸ್ಮಾರ್ತನಂತೆ–ಅವನ ಸ್ಮಾರ್ತನಾದ ಕೇಳಿ ನನಗೆ ಬುದ್ಧಿ ಪಲ್ಲಟವಾಯ್ತು.

ಅಪಘಾತ ಆದವನು ವಿದ್ಯಾರ್ಥಿಯಂತೆ–ಸೀಟ್ ಸಿಗಲಿಲ್ಲವಂತೆ. ಆಸ್ಪತ್ರೇಲಿ ಒಂದು ಸೀಟ್ ಕೊಡಿಸಿದೆ.



ಅಂಚೆ .ಮುಷ್ಕರವಾದಮೇಲೆ ಜನರೆಲ್ಲಾ ಕಾಗದ – ಕಾಗದ ಎಂದಾಗ ಕಾರ್ಡರ್ಸ್ಮಿತ್ " ಈಗ ಅಂಚೆ ವ್ಯವಸ್ಥೆ ಸರಿಮಾಡಿದ್ದೇವೆ. ಮುಷ್ಕರದಿಂದ ಹೆಚ್ಚು ತೊಂದರೆಯಾಗಿಲ್ಲ "

ಬುದ್ಧಿಯ ಮಟ್ಟ

ಸರಿಯಾದ ಉತ್ತರ

1 (3) 2 (4) 3 (3) 4 (4) 5 (2) 6 (3) 7 (3).

ಕಳೆದ ತಿಂಗಳ 'ಬುದ್ಧಿಯ ಮಟ್ಟ'ದ ಉತ್ತರದಲ್ಲಿ 3 (4) ಎಂಬುದಕ್ಕೆ ಬದಲಾಗಿ 3 (3) ಎಂದು ಬಿದ್ದಿದೆ.